# ಕಮಲ ಪಥ

ಸಂಪುಟ : 01 | ಸಂಚಿಕೆ : 01 | ಮಾರ್ಚ್ 2023 | ಬೆಂಗಳೂರು | ರೂ. 10

ವಿಜಯ ಸಂಕಲ್ಪ ಯಾತ್ರೆ

## ಮಹಾ ಸಂಗಮ








ನವದೆಹಲಿಯ ಸುಬ್ರಮಣ್ಯಂ ಸಭಾಂಗಣದಲ್ಲಿ ಆಯೋಜಿಸಿದ್ದ ಗ್ಲೋಬಲ್ ಮಿಲೆಟ್ಸ್
ಸಮ್ಮೇಳನದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ



ಪ್ರಧಾನಿ ಶ್ರೀ ನರೇಂದ್ರ ಮೋದಿ ಹಾಗೂ ಬಾಂಗ್ಲಾದೇಶದ ಪ್ರಧಾನಿ ಶ್ರೀಮತಿ ಶೇಖ್ ಹಸೀನಾ ಅವರಿಂದ
ವೀಡಿಯೋ ಕಾನ್ಫರೆನ್ಸ್ ಮೂಲಕ ಭಾರತ - ಬಾಂಗ್ಲಾದೇಶ ಸ್ನೇಹ ಪೈಪ್‌ಲೈನ್ (ಐಬಿಎಫ್‌ಪಿ) ಉದ್ಘಾಟನೆ




ಬೆಂಗಳೂರಿನ ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಕೇಂದ್ರ ಗೃಹ ಸಚಿವರಾದ ಶ್ರೀ ಅಮಿತ್ ಶಾ ಅವರ ಅಧ್ಯಕ್ಷತೆಯಲ್ಲಿ
ರಾಜ್ಯ ಚುನಾವಣಾ ಪ್ರಚಾರ ಸಮಿತಿ ಹಾಗೂ ರಾಜ್ಯ ಕೋರ್ ಕಮಿಟಿ ಸಭೆ

ಸಂಪಾದಕೀಯ

# ಯುದ್ಧವನ್ನು ಎದುರಿಸಲು ಸರ್ವರೀತಿಯಲ್ಲೂ ಸನ್ನದ್ಧ

ಚುನಾವಣಾ ದಿನಾಂಕ ಘೋಷಣೆಯಾಗಿದೆ. ಬೂತ್ ವಿಜಯ ಅಭಿಯಾನ, ಬೂತ್ ಸಶಕ್ತಿಕರಣ ಅಭಿಯಾನ, ವಿಜಯ ಸಂಕಲ್ಪ ಅಭಿಯಾನದ ಮೂಲಕ ಅತ್ಯಂತ ಯೋಜಿತವಾಗಿ ಸಂಘಟನೆಯನ್ನು ಸರ್ವ ರೀತಿಯಲ್ಲೂ ಸನ್ನದ್ಧವಾಗಿಸಿದ ಹೆಗ್ಗಳಿಕೆ ಬಿಜೆಪಿ ನಾಯಕತ್ವದ್ದಾದರೆ, ಸಂಘಟನೆಯ ಅಪೇಕ್ಷೆಗೆ ತಕ್ಕಂತೆ, ಪರಿಸ್ಥಿತಿಗೆ ಅನುಗುಣವಾಗಿ ನಾಯಕತ್ವ ಯೋಜಿಸುವ ರಣತಂತ್ರಗಳನ್ನು ಕಾರ್ಯರೂಪಕ್ಕಿಳಿಲು ಬದ್ಧತೆಯ ಕಾರ್ಯಕರ್ತರ ಪಡೆಯೂ ಸಿದ್ದವಾಗಿದೆ. ಸಂಘಟನೆಯ ನಾಯಕತ್ವ ಮಾಡುತ್ತಿರುವ ನಿರಂತರ ಪ್ರವಾಸಗಳು, ಇಡೀ ರಾಜ್ಯದ ಮೂಲೆ ಮೂಲೆಯಲ್ಲಿಯೂ ಚುನಾವಣಾ ದೃಷ್ಟಿಯಿಂದಲೇ ಆಯೋಜಿತವಾಗುತ್ತಿರುವ ಸಭೆ, ಸಮಾವೇಶಗಳು ಬಿಜೆಪಿಯಲ್ಲಿ ಆತ್ಮ ವಿಶ್ವಾಸವನ್ನು ತುಂಬುತ್ತಿದ್ದರೆ, ಕಾಂಗ್ರೆಸ್ ಹಾಗೂ ಜೆಡಿಎಸ್‌ನಲ್ಲಿ ಬಿಜೆಪಿಯ ವಿರುದ್ಧದ ಸೆಣೆಸಾಟ ಅಂದುಕೊಂಡಷ್ಟು ಸಲೀಸಲ್ಲ ಎನಿಸಿ ಬಿಟ್ಟಿದೆ.

ಇನ್ನು ಚುನಾವಣಾ ಪೂರ್ವ ತಯಾರಿಯ ಜೊತೆಗೆ ಚುನಾವಣಾ ನಿರ್ವಹಣೆಗೂ ನಿಯೋಜಿತ ತಂಡ ವಿವಿಧ ವಿಭಾಗಗಳಲ್ಲಿ ನಿರಂತರ ಸಭೆಗಳನ್ನು ನಡೆಸುವುದರ ಮೂಲಕ ಪರಿಣಾಮಕಾರಿ ಚುನಾವಣಾ ತಂತ್ರಗಳನ್ನು ಕಾರ್ಯ ರೂಪಕ್ಕಿಳಿಸಲು ಯೋಜಿತ ಕಾರ್ಯಸೂಚಿಯನ್ನು ಕಾರ್ಯ ರೂಪಕ್ಕಿಳಿಸುವಲ್ಲಿ ಕ್ರಿಯಾಶೀಲವಾಗಿದೆ. ಸ್ವತಃ ಪ್ರಧಾನಿ ಶ್ರೀ ನರೇಂದ್ರ ಮೋದಿಯವರೇ ಖುದ್ದಾಗಿ ಮೇಲಿಂದ ಮೇಲೆ ಮಾಡುತ್ತಿರುವ ಪ್ರವಾಸಗಳು ಇಡೀ ನಾಡಿನಲ್ಲಿ ಬಿಜೆಪಿಯ ಪರವಾದ ವಾತಾವರಣ ಸೃಷ್ಟಿಯಾಗಿಸುವಲ್ಲಿ ಯಶಸ್ವಿಯಾಗಿದೆ. ಶ್ರೀ ಅಮಿತ್‌ಶಾ ಮತ್ತು ಶ್ರೀ ಜಗತ್ ಪ್ರಕಾಶ್‌ರವರು ಮಾಡುತ್ತಿರುವ ಪ್ರವಾಸ ಕಾರ್ಯಕರ್ತರಿಗೆ ನವ ಚೈತನ್ಯವನ್ನು ತುಂಬುತ್ತಿದೆ. ಈ ಇಳಿ ವಯಸ್ಸಿನಲ್ಲೂ ಛಲದಿಂದ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸುತ್ತಿರುವ ಶ್ರೀ ಯಡಿಯೂರಪ್ಪನವರು ಅಪರೂಪದ ನಾಯಕತ್ವಕ್ಕೊಂದು ಉದಾಹರಣೆಯಾಗಿದ್ದಾರೆ. ತಮ್ಮ ಸಾಧನೆಗಳನ್ನು ಬೆನ್ನಿಗಿಟ್ಟುಕೊಂಡು ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿಯವರು ಬಿಜೆಪಿಯೇ ಭರವಸೆ ಎಂಬುದನ್ನು ಜನರ ಮನದಲ್ಲಿ ಅಚ್ಚೊತ್ತಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇನ್ನು ಬಿಜೆಪಿ ಮಾಡುತ್ತಿರುವ ಅಭ್ಯರ್ಥಿಯ ಆಯ್ಕೆ ಪ್ರಕ್ರಿಯೆಯೂ ಬಿಜೆಪಿ ಪದಾಽಕಾರಿಗಳಿಗೆ ಸಿಗುತ್ತಿರುವ ಮಾನ್ಯತೆಯ ಪ್ರತೀಕವಾಗಿದೆ. ಇದು ಚುನಾವಣಾ ರಣರಂಗದಲ್ಲಿ ರಣೋತ್ಸಾಹದಲ್ಲಿ ಹೋರಾಡಲು ಪದಾಽಕಾರಿ ಕಾರ್ಯಕರ್ತನಿಗೆ ಹೊಸದೊಂದು ಹುರುಪನ್ನು ನೀಡಿದೆ.

ಇವೆಲ್ಲವುಗಳ ನಡುವೆ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಬಿಜೆಪಿ ಮೇಲೆ ಮತ್ತದೇ ಹಳೇ ಹುರುಳಿಲ್ಲದ ಆರೋಪಗಳನ್ನು ಮಾಡುವುದರಲ್ಲೇ ನಿರತವಾಗಿವೆ. ಕಾಂಗ್ರೆಸ್‌ಂತೂ ದಿನೇ ದಿನೇ ಘೋಷಿಸುತ್ತಿರುವ ಕಾರ್ಯಸಾಧುವಲ್ಲದ ಉಚಿತ ಎಂಬ ಗ್ಯಾರಂಟಿ ಘೋಷಣೆಗಳ ಬಗ್ಗೆ ನಾಡಿನ ಜನತೆಗೂ ವಿಶ್ವಾಸವಿಲ್ಲದಂತಾಗಿದೆ. ಘೋಷಣೆಗಳಲ್ಲೇ ಜನತೆಯ ಹೊಟ್ಟೆ ತುಂಬಿಸಿ, ವಂಚಿಸಿ ಅಧಿಕಾರ ಅನುಭವಿಸಿದ ಕಾಂಗ್ರೆಸ್‌ನ ನಾಟಕವನ್ನು ನಾಡಿನ ಪ್ರಬುದ್ಧ ಮತದಾರ ಅರಿತಿದ್ದಾನೆ. ಕಾಂಗ್ರೆಸ್‌ನ ಗ್ಯಾರಂಟಿ ಉಚಿತ ಘೋಷಣೆಗಳ ಮತ್ತು ಜೆಡಿಎಸ್‌ನ ಕುಟುಂಬ ರಾಜಕಾರಣದ ವೈರುಧ್ಯಗಳ ನಡುವೆ ಜನತೆಗೆ ಬಿಜೆಪಿಯೇ ಭರವಸೆ ಎಂಬುದು ಮನದಟ್ಟಾಗಿದೆ. ಇನ್ನುಳಿದ ಕೆಲವು ದಿನಗಳಲ್ಲಿ ಪ್ರತೀ ಬಿಜೆಪಿ ಕಾರ್ಯಕರ್ತನೂ ನಾಡಿನ ಮನೆ ಮನೆಯನ್ನೂ ಮುಟ್ಟುವುದರ ಜೊತೆಗೆ, ಪ್ರತೀ ಮತದಾರನ ಮನವನ್ನೂ ಮುಟ್ಟಬೇಕಾಗಿದೆ. ಶ್ರೇಷ್ಟ ನಾಯಕತ್ವವಿದೆ, ಜನಪರ ಕಾಳಜಿಯಿಂದ ರೂಪಿತವಾದ ಡಬಲ್ ಇಂಜಿನ್ ಸರಕಾರಗಳ ಸಾಧನೆಯೂ ನಮ್ಮ ಜೊತೆಗಿದೆ. ಸಶಕ್ತ ಸಂಘಟನೆಯ ಸಹವರ್ತಿಗಳೊಂದಿಗೆ ಭರವಸೆಯಿಂದ ಮತ್ತಷ್ಟು ಕ್ರಿಯಾಶೀಲರಾಗೋಣ, ಬಿಜೆಪಿ ಗೆಲ್ಲಿಸೋಣ.

ಈ ಮಧ್ಯೆ ಕಳೆದ ಬಿಜೆಪಿಯ ಯುವಮೋರ್ಚಾ ತಂಡದಿಂದ ಸಾಕಾರವಾದ ಕಾರ್ಯವೊಂದನ್ನು ಉಲ್ಲೇಖಿಸಲೇಬೇಕು. ಸ್ವಾತಂತ್ರ್ಯ ಹೋರಾಟದ ಪವಿತ್ರ ಭೂಮಿಯಾದ ಬಸವಕಲ್ಯಾಣ ತಾಲೂಕಿನ ಗೊರಟಾ ಗ್ರಾಮದಲ್ಲಿ ಹುತಾತ್ಮರಾದ ಹೋರಾಟಗಾರರ ಸ್ಮರಣಾರ್ಥ ಹುತಾತ್ಮರ ಸ್ಮಾರಕವನ್ನು ಶ್ರೀ ಅಮಿತ್‌ಶಾರವರು ಲೋಕಾರ್ಪಣೆ ಮಾಡಿದರು. ಸ್ವತಃ ಶ್ರೀ ಅಮಿತ್‌ಶಾರವರೇ ಭೂಮಿಪೂಜೆ ಮಾಡಿದ್ದಂತಹ ಸ್ತುತ್ಯಾರ್ಹವಾದ ಕಾರ್ಯವನ್ನು ಅದೇ ಶ್ರೀ ಅಮಿತ್‌ಶಾರವರೇ ಲೋಕಾರ್ಪಣೆ ಮಾಡಿದ್ದು ವಿಶೇಷದ ಸಂಗತಿ. ರಾಜಕೀಯದ ಅಪರೂಪದ ಈ ಕಾರ್ಯವನ್ನು ಸಾಕಾರಗೊಳಿಸಿದ ಅಂದಿನ ಯುವಮೋರ್ಚಾದ ಅಧ್ಯಕ್ಷರಾದ ಶ್ರೀ ತುಳಸಿ ಮುನಿರಾಜುಗೌಡರು ಹಾಗೂ ಅವರ ತಂಡ ನಿಜಕ್ಕೂ ಅಭಿನಂದನೆಗೆ ಅರ್ಹರು.

(ಬಿದರೆ ಪ್ರಕಾಶ್)

## ಸುಭಾಷಿತ



ನಾವು ಉದ್ದೇಶದ ಆಳ ಮತ್ತು
ಪ್ರಾಮಾಣಿಕತೆ ಹಾಗೂ
ಮಾತಿನಲ್ಲಿ ಹೆಚ್ಚಿನ ಧೈರ್ಯ ಮತ್ತು
ಕಾರ್ಯದಲ್ಲಿ ಶ್ರದ್ಧೆ ಹೊಂದಿರಬೇಕು.

– ಸರೋಜಿನಿ ನಾಯ್ಡು



**ನೂತನ ತಂಡ**

**ಶೀಘ್ರದಲ್ಲಿ...**



## ಈ ಸಂಚಿಕೆಯಲ್ಲಿ...

5



ಬೆಣ್ಣೆನಗರಿ ದಾವಣಗೆರೆಯಲ್ಲಿ

# ದಿಗ್ವಿಜಯದ ಮಹಾಸಂಗಮ


- ಬೆಂಗಳೂರಿನಲ್ಲಿ ಮೋದಿ ಸಂಚಲನ ....................................13
- ರಾಜ್ಯದಲ್ಲಿ ಸಂಚರಿಸುತ್ತಿರುವ ಪ್ರಗತಿ ರಥ..................................16
- ಶ್ರೀ ಅಮಿತ್ ಶಾ ಕರ್ನಾಟಕ ಪ್ರವಾಸ ....................................17
- ಬಿಜೆಪಿ ಸರ್ಕಾರದಿಮದ ಐತಿಹಾಸಿಕ ನಿರ್ಧಾರ..................................20
- ಮೋರ್ಚಾಗಳ ಸಮಾವೇಶ ..............................................22
- ಬಿಜೆಪಿಯೇ ಭರವಸೆ ..................................................24

ಬೆಣ್ಣೆನಗರಿ ದಾವಣಗೆರೆಯಲ್ಲಿ

# ದಿಗ್ವಿಜಯದ ಮಹಾಸಂಗಮ



ವಿಜಯ ಸಂಕಲ್ಪ ಯಾತ್ರೆ

## ವಿಧಾನಸಭಾ ಚುನಾವಣೆಗೆ ಮೊಳಗಿದ ಉತ್ಸಾಹದ ಕಹಳೆ


(ವರದಿ)



ಮಹೇಶ್ ಹೆಗಡೆ
ಬಿಜೆಪಿ ಕಾರ್ಯಕರ್ತರು




ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ **150+** ಸ್ಥಾನ ಗೆಲ್ಲುವ ಉದ್ದೇಶ ಮತ್ತು ಗುರಿಯೊಂದಿಗೆ ರಾಜ್ಯದ ಜನರನ್ನು ತಲುಪಲು ಮಾರ್ಚ್-2 ರಿಂದ ನಾಲ್ಕು ತಂಡಗಳಲ್ಲಿ ಆರಂಭವಾದ **ವಿಜಯ ಸಂಕಲ್ಪ ಯಾತ್ರೆ**ಯ **ಮಹಾಸಂಗಮ** ಬೆಣ್ಣೆನಗರಿ ದಾವಣಗೆರೆಯಲ್ಲಿ ಜರುಗಿತು.






# ತೆರೆದ ವಾಹಾನದಲ್ಲಿ ಮುಖ್ಯ ವೇದಿಕೆಗೆ ಬಂದ ಪ್ರಧಾನಿ

# ಶ್ರೀ ನರೇಂದ್ರ ಮೋದಿ

**ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ವಿಜಯ ಸಂಕಲ್ಪ ಯಾತ್ರೆಯ ಮಹಾಸಂಗಮದಲ್ಲಿ ಭಾಗಿಯಾಗುವ ಮೂಲಕ ಕಾರ್ಯಕರ್ತರಲ್ಲಿ ಉತ್ಸಾಹ ಮೂಡಿಸಿದರೆ ಎದುರಾಳಿಗಳಲ್ಲಿ ನಡುಕ ಹುಟ್ಟಿಸಿತ್ತು. ಪ್ರಧಾನಿ ಶ್ರೀ ಮೋದಿಯವರು ತಮ್ಮ ಮೊನಚಿನ ಮಾತುಗಳ ಮೂಲಕ ಕರ್ನಾಟಕ ವಿಧಾನಸಭಾ ಚುನಾವಣೆಗೆ ರಣಕಹಳೆ ಮೊಳಗಿಸಿದರು. ಮೂರು ತಿಂಗಳಿಂದ ಸತತವಾಗಿ ನಡೆಯುತ್ತಿದ್ದ ಒಂದಿಲ್ಲೊಂದು ಕಾರ್ಯಕ್ರಮದ ಫಲವಾಗಿ ಮಹಾಸಂಗಮ ನಿರೀಕ್ಷೆಗೂ ಮೀರಿದ ಯಶಸ್ಸಿಗೆ ಕಾರಣವಾಯಿತು.**

ಕಿಕ್ಕಿರಿದು ತುಂಬಿದ ಜನಸಮೂಹದ ಸಭಾಗಂಣದ ಸುತ್ತಲೂ ತೆರೆದ ವಾಹಾನದಲ್ಲಿ ರೋಡ್ ಶೋ ಮೂಲಕ ಪ್ರಧಾನಿ ಶ್ರೀ ಮೋದಿಯವರು ಮುಖ್ಯ ವೇದಿಕೆಗೆ ಆಗಮಿಸಿದ್ದು ವಿಶೇಷ ಆಕರ್ಷಣೆಯಾಗಿತ್ತು. ಪೆಂಡಾಲ್‌ನೊಳಗೆ ಸುಮಾರು 20 ಅಡಿ ಅಗಲದ ಜಾಗದಲ್ಲಿ ಅಂದಾಜು ಅರ್ಧ ಕಿ. ಮೀ. ನಷ್ಟು ತೆರೆದ ಜೀಪಿನಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ರೋಡ್ ಶೋನಲ್ಲಿ ಭಾಗಿಯಾದರು. ರಾಜ್ಯದಲ್ಲಿ ಪ್ರಧಾನಿ ಶ್ರೀ ಮೋದಿ ಅವರು ಈ ರೀತಿಯ ರೋಡ್ ಶೋನಲ್ಲಿ ಭಾಗವಹಿಸಿದ್ದು ಇದೇ ಮೊದಲಾಗಿದೆ. ಜೀಪ್‌ನಲ್ಲಿ ನಿಂತು ಕೈ ಮುಗಿಯುತ್ತಾ, ಕೈ ಬೀಸುತ್ತಾ, ಮಂದಹಾಸದಿಂದ ಸಾಗಿದ ಪ್ರಧಾನಿಯವರನ್ನು ಕಂಡು ಪುಳಕಿತರಾದ ಜನ ‘ಮೋದಿ ಮೋದಿ ಮೋದಿ’ ಎಂಬ ಹರ್ಷೋದ್ಗಾರ ಹಾಕಿ, ಹೂಮಳೆಗರೆದು ಸಂಭ್ರಮಪಟ್ಟರು. ಚೆಂಡು ಹೂವುಗಳಿಂದ ಅಲಂಕರಿಸಿದ್ದ ತೆರೆದ ವಾಹನದಲ್ಲಿ ಪ್ರಧಾನಿ ಶ್ರೀ ಮೋದಿ ಅವರೊಂದಿಗೆ ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ, ರಾಜ್ಯಾಧ್ಯಕ್ಷರಾದ ಶ್ರೀ ನಳಿನ್ ಕುಮಾರ್ ಕಟೀಲ್ ಸಾಥ್ ನೀಡಿದರು.




### ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿದ ಪ್ರಧಾನಿ ಮಾತು

ವಿಜಯ ಸಂಕಲ್ಪ ಯಾತ್ರೆಯ ಸಮಾರೋಪದ ಮಹಾಸಂಗಮದಲ್ಲಿ ಮಾತನಾಡಿದ ಮಾತು ಬಿಜೆಪಿಯ ಪ್ರತಿಯೊಬ್ಬ ಕಾರ್ಯಕರ್ತರಲ್ಲಿ ಚುನಾವಣೆಗೆ ಉತ್ಸಾಹದ ಚಿಲುಮೆ ಹೆಚ್ಚಿಸಿದರೆ, ವಿರೋಧ ಪಕ್ಷದವರಲ್ಲಿ ಸೋಲಿನ ಭಯ ಮೂಡಿಸಿತ್ತು. ಕನ್ನಡದಲ್ಲೆ ಮಾತು ಆರಂಭಿಸಿದ ಮೋದಿ ಅವರು 'ನಾನು ಪ್ರತಿಬಾರಿ ದಾವಣಗೆರೆ, ರಾಜ್ಯಕ್ಕೆ ಬಂದಾಗ ನಿಮ್ಮ ಆಶೀರ್ವಾದದ ಪ್ರೀತಿ ಹೆಚ್ಚುತ್ತಲೇ ಇದೆ' ಎಂದು ಸಂತಸ ವ್ಯಕ್ತಪಡಿಸಿದರು.

### ಕಾಂಗ್ರೆಸ್ ನಾಯಕರಿಗೆ ಟಾಂಗ್

ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷರ ಕರ್ಮಭೂಮಿ ಕಲಬುರಗಿಯಲ್ಲಿ ನಡೆದ ಮೇಯರ್, ಉಪ ಮೇಯರ್ ಚುನಾವಣೆಯಲ್ಲಿ ಬಿಜೆಪಿ ವಿಜಯ ಪತಾಕೆ ಹಾರಿಸಿದ್ದು, ಇದು ವಿಜಯ ಸಂಕಲ್ಪ ಯಾತ್ರೆಯ ಯಶಸ್ಸಿನ ಶುಭ ಸಂಕೇತವಾಗಿದೆ ಎಂದು ಹೇಳಿದರು. ಸೋಷಿಯಲ್ ಮೀಡಿಯಾದಲ್ಲಿ ಒಂದು ವಿಡಿಯೋ ನೋಡಿದೆ, ಕಾಂಗ್ರೆಸ್‌ನ ಮಾಜಿ ಮುಖ್ಯಮಂತ್ರಿಯೊಬ್ಬರು ತಮ್ಮದೆ ಪಕ್ಷದ ಕಾರ್ಯಕರ್ತನಿಗೆ ಕಪಾಳ ಮೋಕ್ಷ ಮಾಡಿದ್ದನ್ನು ನೋಡಿದೆ. ತಮ್ಮದೆ ಪಕ್ಷದ ಕಾರ್ಯಕರ್ತರಿಗೆ ಗೌರವ ಕೊಡಲಾಗದವರು, ಜನರಿಗೆ ಹೇಗೆ ಗೌರವ ನೀಡುತ್ತಾರೆ ಎಂದು ಟಾಂಗ್ ನೀಡಿದರು. ಬಿಜೆಪಿಯಲ್ಲಿ ಯಾರೂ ದೊಡ್ಡವರಲ್ಲ, ಯಾರೂ ಸಣ್ಣವರಲ್ಲ, ಇಲ್ಲಿ ಎಲ್ಲರೂ ಸರಿ ಸಮಾನರು. ಬಿಜೆಪಿಯ ಪ್ರತಿಯೊಬ್ಬ ಕಾರ್ಯಕರ್ತ ನನಗೆ ಪರಮಮಿತ್ರರಂತೆ ಎನ್ನುವ ಮೂಲಕ ಬಿಜೆಪಿ ಕಾರ್ಯಕರ್ತರಿಗೆ ಕೊಡುವ ಗೌರವವನ್ನು ವ್ಯಕ್ತಪಡಿಸಿದರು.

### ಕರ್ನಾಟಕದಲ್ಲೂ ಮೊಳಗಲಿ ಜೈ ಜೈ ಕಾರ

ಅಂದು ನೀವೆಲ್ಲರೂ ಬಿಜೆಪಿಗೆ ಓಟ್ ನೀಡಿದ್ದರಿಂದ ಪ್ರಪಂಚದಾದ್ಯಂತ ಭಾರತದ ಪರ ಜೈಕಾರ ಮೊಳಗುತ್ತಿದೆ. ಇದು ಮೋದಿಯಿಂದ ಸಾಧ್ಯವಾಗಿದ್ದಲ್ಲ ನೀವೆಲ್ಲರೂ ಓಟ್ ನೀಡಿದ್ದರಿಂದ ಸಾಧ್ಯವಾಗಿದೆ. ಅದೇ ರೀತಿ ಮುಂದಿನ ದಿನಗಳಲ್ಲಿ ಸಹ ಜೈ ಕಾರ ಕೇಳುವಂತೆ ನೀವು ಸಹಕರಿಸಬೇಕು ಎಂದು ಕರೆ ನೀಡಿದರು.

### ಕರ್ನಾಟಕಕ್ಕೂ ಬೇಕು ಸ್ಥಿರ ಸರ್ಕಾರ

ಚುನಾವಣೆ ಸಮಯದಲ್ಲಿ ಕಾಂಗ್ರೆಸ್‌ನ ಬೋಗಸ್ ಗ್ಯಾರಂಟಿ ಕಾರ್ಡ್‌ಗಳಿಗೆ ಯಾರೂ ಮರುಳಾಗಬೇಡಿ. ಕರ್ನಾಟಕದಲ್ಲೂ ಕಾಲಿಡಲು ಅವಕಾಶ ಆಗದ ರೀತಿಯಲ್ಲಿ ರಾಜ್ಯವನ್ನು ಕಾಂಗ್ರೆಸ್ ಮುಕ್ತವಾಗಿಸಿ ಎಂದು ಪ್ರಧಾನಿಯವರು ಕರೆ ನೀಡಿದರು. ಇವರ ಆಟವನ್ನು ಹಿಮಾಚಲ ಪ್ರದೇಶದಲ್ಲಿ ನೋಡಿದ್ದೇವೆ. ಕಾಂಗ್ರೆಸ್‌ನವರು ಚುನಾಣೆಯ ಮೊದಲು ದೊಡ್ಡ ದೊಡ್ಡ ವಾಗ್ದಾನ ನೀಡಿದ್ದರು. ಆದರೆ ಮೊದಲ ಬಜೆಟ್‌ನಲ್ಲಿ ಯಾವ ವಾಗ್ದಾನವನ್ನೂ ಈಡೇರಿಸಲಿಲ್ಲ. ಹಿಮಾಚಲದ ಪರಿಸ್ಥಿತಿ ಕರ್ನಾಟಕದಲ್ಲಿ ಬಾರದಂತೆ ಎಚ್ಚರಿಕೆ ವಹಿಸಿ ಎಂದು ಹೇಳಿದರು.

ಮಾತು ಮುಂದುವರೆಸಿದ ಮೋದಿಯವರು, 'ಕರ್ನಾಟಕಕ್ಕೆ ಪೂರ್ಣ ಬಹುಮತದ ಸರ್ಕಾರ ಬೇಕೋ ಬೇಡವೋ' ಎಂದು ಪ್ರಶ್ನೆ ಮಾಡಿದರು. ದಲಿತರು, ಆದಿವಾಸಿಗಳು, ಹಿಂದುಳಿದ ವರ್ಗದವರೂ, ಲಂಬಾಣಿಗಳು ಸೇರಿದಂತೆ ಸರ್ವರ ಅಭಿವೃದ್ಧಿಯನ್ನು ನಾವು ಮಾಡಿದ್ದೇವೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬರದಿದ್ದರೆ ರಾಜ್ಯಕ್ಕೆ ನಷ್ಟವಾಗಲಿದೆ. ಅದಕ್ಕೆ ಬಿಜೆಪಿ ಬಹುಮತ ನೀಡಿ ಸ್ಥಿರ ಸರ್ಕಾರವನ್ನು ತನ್ನಿ ಎಂದು ವಿನಂತಿಸಿಕೊಂಡರು.

### ಕಮಲ್ ಖಿಲೇಗಾ, ಕಮಲ್ ಖಿಲೇಗಾ

ಮಹಾಸಂಗಮದಲ್ಲಿ ಮಾತನಾಡುತ್ತಾ ಒಂದು ಹೊಸ ಘೋಷವಾಕ್ಯವನ್ನು ನೀಡಿದರು. 'ಮೋದಿ ತೇರಾ ಕಮಲ್ ಖಿಲೇಗಾ (ಮೋದಿ ನಿಮ್ಮ ಕಮಲ ಅರಳಿಸುತ್ತೇವೆ)' ಎನ್ನುವ ಘೋಷಣೆ ನೀಡಿದರು. ಕಾಂಗ್ರೆಸಿನವರು, ಮೋದಿ ನಿನ್ನ ಸಮಾಧಿ ತೋಡುತುತ್ತೇವೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ಉತ್ತರವಾಗಿ 'ಮೋದಿ ನಿನ್ನ ಕಮಲ ಅರಳಿಸುತ್ತೇವೆ' ಎಂದು ಕರ್ನಾಟಕದ ಜನ ಹೇಳಬೇಕು ಎಂದು ಕರೆ ನೀಡಿದರು.

ಮೊಬೈಲ್‌ನಲ್ಲಿ ಬೆಳಗಿದ ವಿಜಯ ಪ್ರಕಾಶದ ಬೆಳಕು: ಪ್ರಧಾನಿ ಶ್ರೀ ಮೋದಿಯವರು ತಮ್ಮ ಪ್ರಖರವಾದ ಮತ್ತು ಉತ್ಸಾಹ ಭರಿತ ಭಾಷಣದ ಕೊನೆಯಲ್ಲಿ ಸಮಾವೇಶದಲ್ಲಿ ಸೇರಿದ್ದ ಲಕ್ಷಾಂತರ ಜನರಲ್ಲಿ ತಮ್ಮ ಮೋಬೈಲ್‌ನ ಟಾರ್ಚ್ ಆನ್ ಮಾಡುವಂತೆ ಹೇಳಿ, ಇದು ವಿಜಯ ಸಂಕಲ್ಪದ ಬೆಳಕು. ಈ ಬೆಳಕನ್ನು ಪ್ರತಿ ಬೂತ್‌ಗೆ ತಲುಪಿಸಬೇಕು ಎಂದು ಕರೆ ನೀಡಿದರು.

ಯಾತ್ರೆ ಯಶಸ್ಸಿಗೆ ಧನ್ಯವಾದ: 'ಹರಿಹರೇಶ್ವರ ಮಂದಿರದ ರೂಪದಲ್ಲಿ ಹರಿ ಮತ್ತು ಹರರ ಸಮನ್ವಯವಾಗಿದೆ. ತುಂಗ ಭದ್ರೆಯೂ ಇಲ್ಲಿದ್ದಾಳೆ, ಅಂಥ ಹರಿಹರದ ಸಮೀಪದಲ್ಲಿರುವ ಈ ಪುಣ್ಯ ಕ್ಷೇತ್ರದಲ್ಲಿ ಕರ್ನಾಟಕ ಬಿಜೆಪಿಯು ನಾಲ್ಕು ವಿಜಯ ಯಾತ್ರೆಗಳ ಮಹಾಸಂಗಮವಾಗಿದೆ. ಇದಕ್ಕಾಗಿ ಕರ್ನಾಟಕ ಬಿಜೆಪಿಯ ಎಲ್ಲ ಕಾರ್ಯಕರ್ತರಿಗೆ ಹೃದಯಾಂತರಾಳದ ಧನ್ಯವಾದ ಸಮರ್ಪಿಸುತ್ತಿದ್ದೇನೆ. ಪ್ರತಿ ಯಾತ್ರೆಯಲ್ಲೂ ಜನರ ವಿಶ್ವಾಸ ವ್ಯಕ್ತವಾಗಿರುವುದನ್ನು ವಿಡಿಯೋಗಳಲ್ಲಿ ನೋಡಿದ್ದೇನೆ, ಇದು ಅಭೂತಪೂರ್ವ ಮತ್ತು ಅದ್ಭುತ' ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ಹೇಳಿದರು.



## ಮನೆ ಮೆನೆಗೆ ತೆರಳಿ ಪ್ರಚಾರ ಮಾಡಿ

ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮಾತನಾಡಿ, ನಮ್ಮ ದೇಶದ ಪ್ರಧಾನ ಮಂತ್ರಿಗಳು ಪ್ರತಿನಿತ್ಯ 18 ಗಂಟೆ ಕೆಲಸ ಮಾಡುತ್ತಾರೆ. ಆದರೆ ನಾವು ಈ ಚುನಾವಣೆಯ ಇನ್ನೆರಡು ತಿಂಗಳು ನಿರಂತರವಾಗಿ ಕೆಲಸ ಮಾಡಬೇಕು. ಮನೆ ಮನೆಗೆ ತೆರಳಿ ಕೇಂದ್ರದ ಮತ್ತು ರಾಜ್ಯ ಸರ್ಕಾರಗಳ ಯೋಜನೆಯನ್ನು ತಲುಪಿಸ ಬೇಕು. ನಾನು ರಾಜ್ಯವನ್ನು ಸುತ್ತಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಇಡೀ ರಾಜ್ಯವನ್ನು ಸುತ್ತುತ್ತೇನೆ. ಕರ್ನಾಟಕದಲ್ಲಿ ಮತ್ತೆ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರುತ್ತೇವೆ ಎಂದು ನಾವೆಲ್ಲರೂ ಸೇರಿ ಪ್ರಧಾನಿ ಶ್ರೀ ಮೋದಿಯವರಿಗೆ ಮಾತು ಕೊಡೋಣ ಎಂದು ಹೇಳಿ ಕಾರ್ಯಕರ್ತರನ್ನು ಹುರಿದುಂಬಿಸಿದರು.




## ರಾಜ್ಯದ ಭವಿಷ್ಯ ರೂಪಿಸಿದ ದಿಗ್ವಿಜಯ ಯಾತ್ರೆ

ಸಮಾವೇಶದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ ಅವರು ಮಾತನಾಡಿ, ಈಗ ಗ್ಯಾರೆಂಟಿ ಕಾರ್ಡ್ ಕೊಡುತ್ತಿರುವ ಕಾಂಗ್ರೆಸ್ಸಿಗರು 70 ವರ್ಷ ಕಡುಬು ತಿನ್ನುತ್ತಿದ್ದೀರಾ? ಎಂದು ಪ್ರಶ್ನಿಸಿದರು.

ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯ ಮೂಲಕ ಪಕ್ಷದ ಪರ ಸುನಾಮಿ ಎದ್ದಿದೆ. ಬಿಜೆಪಿಯ ಈ ದಿಗ್ವಿಜಯ ಯಾತ್ರೆ ರಾಜ್ಯದ ಭವಿಷ್ಯ ರೂಪಿಸಲಿದೆ ಎಂದು ಹೇಳಿದರು. ಕಾಂಗ್ರೆಸ್ಸಿನವರು ಮೋದಿ ಜೊತೆಗೆ ಸಂವಿಧಾನವನ್ನು ಹೀಗೆಳೆಯುವ ದುಷ್ಟ ಕೆಲಸದಲ್ಲಿ ತೊಡಗಿದ್ದಾರೆ. ದೇಶದ ಅವಹೇಳ ಮಾಡುವ ನಾಯಕತ್ವ ಬೇಕಾ? ಎಂದು ಜನ ಯೋಚಿಸಬೇಕು. ಕೇಂದ್ರದ ಮೋದಿ ನೇತೃತ್ವದ ಸರ್ಕಾರ, ರಾಜ್ಯದ ನಮ್ಮ ಬಿಜೆಪಿ ಸರ್ಕಾರ ಡಬಲ್ ಎಂಜಿನ್ ಸರ್ಕಾರವಾಗಿ ರಾಜ್ಯದ ಅಭಿವೃದ್ಧಿಯ ವೇಗವನ್ನು ಹೆಚ್ಚಿಸಿದೆ. ಅದಕ್ಕೆ ಮತ್ತೊಮ್ಮೆ ಬಿಜೆಪಿ ಸರ್ಕಾರವನ್ನು ಸ್ಪಷ್ಟ ಬಹುಮತದೊಂದಿಗೆ ಚುನಾಯಿಸಿ ಕಳುಹಿಸಿ ಎಂದ ಮನವಿ ಮಾಡಿದರು.

ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ನಳಿನ್ ಕುಮಾರ ಕಟೀಲ್, ಮುಖ್ಯ ಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ, ಶ್ರೀ ಜಗದೀಶ್ ಶೆಟ್ಟರ್, ಶ್ರೀ ಸದಾನಂದಗೌಡ, ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ ಜೋಶಿ, ಶ್ರೀ ಎ. ನಾರಾಯಣಸ್ವಾಮಿ, ಕು. ಶೋಭಾ ಕರಂದ್ಲಾಜೆ, ರಾಜ್ಯ ಸಚಿವರಾದ ಶ್ರೀ ಸಿ.ಸಿ. ಪಾಟೀಲ್, ಶ್ರೀ ಅರಗ ಜ್ಞಾನೇಂದ್ರ, ಶ್ರೀ ಬಿ. ಶ್ರೀ ರಾಮುಲು, ಶ್ರೀ ಬೈರತಿ ಬಸವರಾಜ, ಶ್ರೀ ಗೋವಿಂದ ಕಾರಜೋಳ, ಶ್ರೀ ಆರ್. ಅಶೋಕ್, ಶ್ರೀ ಕೆ.ಎಸ್. ಈಶ್ವರಪ್ಪ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ.ಟಿ. ರವಿ, ಸಂಸದರಾದ ಶ್ರೀ ಜಿ.ಎಂ. ಸಿದ್ದೇಶ್ವರ್, ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ.ಎಸ್. ನವೀನ್ ಸೇರಿದಂತೆ ಕೇಂದ್ರ ಹಾಗೂ ರಾಜ್ಯದ ಸಚಿವರು, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಮುಖಂಡರು ವೇದಿಕೆಯಲ್ಲಿ ಉಪಸ್ಥಿತರಿದ್ದರು.



## ಮಹಾ ಸಂಗಮದ ವಿಶೇಷತೆಗಳು

- ಮೋದಿ ಮೊದಲಬಾರಿಗೆ ವೇದಿಕೆಯ ಸುತ್ತಲೂ ತೆರೆದ ವಾಹನದಲ್ಲಿ ರೋಡ್ ನಡೆಸಿದರು.
- 400 ಎಕರೆ ಜಾಗದಲ್ಲಿ ಪೆಂಡಾಲ್ ನಿರ್ಮಾಣ.
- ಕಾರ್ಯಕರ್ತರ ಆಗಮನಕ್ಕೆ 10 ಸಾವಿರ ಬಸ್ ವ್ಯವಸ್ಥೆ.
- ಮೂರು ಕಿ.ಮಿ ವ್ಯಾಪ್ತಿಯಲ್ಲಿ 44 ಕಡೆ 50 ಎಕರೆಯಲ್ಲಿ ವಾಹನ ನಿಲುಗಡೆ ವ್ಯವಸ್ಥೆ.
- ಕಾರ್ಯಕ್ರಮ ಸುಗಮವಾಗಿ ನಡೆಯಲು ಮೂರು ಸಮಾಂತರ ವೇದಿಕೆ ನಿರ್ಮಾಣ.
- ಅಲ್ಲಲ್ಲಿ 50 ಎಲ್ಇಡಿ ಪರದೆಗಳ ಅಳವಡಿಕೆ.
- 1 ಸಾವಿರ ಬಾಣಸಿಗರಿಂದ ಬಂದವರಿಗೆ ಊಟ, ತಿಂಡಿಯ ತಯಾರಿ.
- 400 ಕ್ಕೂ ಹೆಚ್ಚು ಕೌಂಟರ್‌ಗಳ ಮೂಲಕ ಊಟದ ವಿತರಣೆ.

### ಜನ ಸಂಕಲ್ಪದಿಂದ-ಬೂತ್ ವಿಜಯದಿಂದ-ವಿಜಯ ಸಂಕಲ್ಪ

ಸಾಮಾನ್ಯವಾಗಿ ಆಡಳಿತ ನಡೆಸುವ ಪಕ್ಷಕ್ಕೆ ಆಡಳಿತ ವಿರೋಧಿ ಅಲೆ ಇರುವುದು ಸ್ವಾಭಾವಿಕ. ಅದರಂತೆ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ನಮ್ಮ ಬಿಜೆಪಿ ಸರ್ಕಾರಕ್ಕೂ ಅಲ್ಪ ಪ್ರಮಾಣದ ವಿರೋಧಿ ಅಲೆ ಇತ್ತು. ಆದರೆ ಅದೆಲ್ಲವನ್ನು ಹಿಮ್ಮೆಟ್ಟಿ ಈಗ ಬಿಜೆಪಿ ಪರ ಅಲೆ ರಾಜ್ಯಾದ್ಯಂತ ಸೃಷ್ಟಿಯಾಗಿದೆ. ಅದಕ್ಕೆ ಮೂಲ ಕಾರಣ ಐದು ತಿಂಗಳಿನಿಂದ ನಡೆಯುತ್ತಿರುವ ಕಾರ್ಯಕ್ರಮಗಳು. ಹೌದು ಕಳೆದ ನವೆಂಬರ್‌ನಿಂದಲೇ ಬಿಜೆಪಿ ಚುನಾವಣಾ ಕಾರ್ಯಕ್ಕೆ ಹೆಜ್ಜೆ ಇಟ್ಟಿತ್ತು. ಅದರ ಭಾಗವಾಗಿ ನವೆಂಬರ್ ತಿಂಗಳಲ್ಲಿ ಆರಂಭಾಗಿದ್ದು, ಜನ ಸಂಕಲ್ಪ ಯಾತ್ರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಯನ್ನು ಸಾರ್ವಜನಿಕರಿಗೆ ತಲುಪಿಸುವ ನಿಟ್ಟಿನಲ್ಲಿ ರಾಜ್ಯಾದ್ಯಂತ 'ಜನ ಸಂಕಲ್ಪ ಯಾತ್ರೆ'ಯನ್ನು ಕೈಗೊಂಡಿತ್ತು. ರಾಜ್ಯದ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಜನ ಸಂಕಲ್ಪ ಮತ್ತು ಕಾರ್ಯಕರ್ತರ ಸಂಕಲ್ಪ ಯಾತ್ರೆಯನ್ನು ಕೈಗೊಂಡು ರಾಜ್ಯ ಮತ್ತು ರಾಷ್ಟ್ರ ನಾಯಕರು ಭಾಗಿಯಾಗುವ ಮೂಲಕ ಸರ್ಕಾರದ ಯೋಜನೆ ಉದ್ದೇಶ, ಗುರಿಯನ್ನು ಸಾರ್ವಜನಿಕರಿಗೆ ತಲುಪಿಸುವಲ್ಲಿ ಈ ಯಾತ್ರೆ ಯಶಸ್ವಿಯಾಗಿತ್ತು.

ಜನ ಸಂಕಲ್ಪ ಯಾತ್ರೆಯ ಯಶಸ್ಸಿನ ನಂತರ ಕೈಗೊಂಡ 'ಅಭಿಯಾನ ಬೂತ್ ವಿಜಯ ಅಭಿಯಾನ'. ರಾಜ್ಯದ ಪ್ರತಿ ಬೂತ್‌ನ, ಪ್ರತಿ ಮನೆಯನ್ನು ತಲುಪುವ ನಿಟ್ಟಿನಲ್ಲಿ ಆರಂಭಿಸಿದ್ದ ಅಭಿಯಾನ ಈ ಬೂತ್ ವಿಜಯ ಅಭಿಯಾನ. ಈ ಅಭಿಯಾನ ನಿರೀಕ್ಷೆಗೂ ಮಿರಿದ ಬೆಂಬಲ ವ್ಯಕ್ತವಾಗಿದ್ದು ಕಾರ್ಯಕರ್ತರಲ್ಲಿ ಮತ್ತು ಪ್ರಮುಖರಲ್ಲಿ ಹೊಸ ಉತ್ಸಾಹವನ್ನು ತಂದುಕೊಟ್ಟಿತು. ಅಷ್ಟೆ ಅಲ್ಲದೆ ಜನರಲ್ಲಿದ್ದ ಆಡಳಿತ ವಿರೋಧಿ ಅಲೆಯು ನಿಧಾನಕ್ಕೆ ಕಡಿಮೆಯಾಗಿ ಆಡಳಿತದಲ್ಲಿ ಭರವಸೆ ಮೂಡುತ್ತಾ ಬಂದಿತು. ಕೇಂದ್ರ ಗೃಹ ಸಚಿವರಾದ ಶ್ರೀ ಅಮಿತ್ ಶಾ ಅವರಿಂದ ಚಾಲನೆಗೊಂಡ ಈ ಬೂತ್ ವಿಜಯ ಅಭಿಯಾನವು ಹತ್ತಕ್ಕಿಂತ ಹೆಚ್ಚುದಿನ ನಡೆಯಿತು. ಈ ಸಮಯದಲ್ಲಿ 50



ಲಕ್ಷಕ್ಕೂ ಹೆಚ್ಚು ಮನೆಗಳ ಮೇಲೆ ಬಿಜೆಪಿ ಧ್ವಜ ಹಾರಿಸಿದರೆ,ಬೂತ್ ಮಟ್ಟದಲ್ಲಿ ಸಮಿತಿಗಳ ಪರಿಶೀಲನೆ ಕಾರ್ಯ ಕೈಗೊಳ್ಳಲಾಯಿತು. ಪ್ರತಿ ಬೂತ್‌ನಲ್ಲಿ ಮತದಾರರ ಪಟ್ಟಿಯ ಪ್ರತಿ ಪೇಜ್‌ಗೆ ಒಬ್ಬ ಪ್ರಮುಖರ ನಿಯುಕ್ತಿ ಮಾಡಿ ಮತಗಟ್ಟೆಗಳ ವ್ಯಾಪ್ತಿಯಲ್ಲಿ ವಾಟ್ಸ್‌ಆ್ಯಪ್‌ಗ್ರೂಪ್‌ಗಳ ರಚನೆ ಮಾಡಿ ಮನೆ ಮನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾಧನೆಗಳ ಕರಪತ್ರವನ್ನು ಹಂಚಲಾಯಿತು. ಬಿಜೆಪಿಯ ಎಲ್ಲಾ ಮೋರ್ಚಾಗಳ ಹಾಗೂ ಪ್ರಕೋಷ್ಠಗಳ ಪ್ರಮುಖರು, ಪದಾಧಿಕಾರಿಗಳು, ಅಲ್ಪಾವಧಿ ವಿಸ್ತಾರಕರು ಸೇರಿದಂತೆ 20 ಲಕ್ಷಕ್ಕೂ ಹೆಚ್ಚಿನ ಕಾರ್ಯಕರ್ತರು ಭಾಗಿಯಾಗಿ ಅಭಿಯಾನದ ಯಶಸ್ಸಿಗೆ ಕಾರಣಿಕರ್ತರಾದರು. ಎರಡು ಕಾರ್ಯಕ್ರಮಗಳ ಯಶಸ್ಸಿನ ಉತ್ಸಾಹದಲ್ಲಿ ಮುಂದುವರೆದ ಭಾಗವಾಗಿ ಆರಂಭಿಸಿದ ಕಾರ್ಯಕ್ರಮವೇ 'ವಿಜಯ ಸಂಕಲ್ಪ ಅಭಿಯಾನ'.

21 ಜನವರಿ 2023 ರಿಂದ 05 ಫೆಬ್ರವರಿ 2023 ರ ವರೆಗೆ ವಿಜಯ ಸಂಕಲ್ಪ ಅಭಿಯಾನ ಅನೇಕ ವಿಶೇಷತೆಗಳಿಂದ ಅತ್ಯಂತ ಯಶಸ್ವಿಯಾಗಿ ಕಾರ್ಯಕರ್ತರಲ್ಲಿ ಇನ್ನೂ ಹೆಚ್ಚಿನ ಹುರುಪನ್ನು ನೀಡಿತು. ಒಟ್ಟು 58,186 ಬೂತ್‌ಗಳಲ್ಲಿನ 39,272 ಬೂತ್‌ಗಳನ್ನು ತಲುಪಿ, ಅಲ್ಲಿಯ 22,55,262 ಮನೆಗಳನ್ನು ಸಂಪರ್ಕಿಸಲಾಗಿದೆ. ಮನೆಗಳಿಗೆ 13,35,254 ಹಾಗೂ ವಾಹನಗಳಿಗೆ 4,91,067 ಸ್ಟಿಕ್ಕರ್‌ಗಳನ್ನು ಅಂಟಿಸಲಾಗಿದೆ. 1,94,814 ಗೋಡೆ ಬರಹ, 32,000ಕ್ಕೂ ಹೆಚ್ಚು ಡಿಜಿಟಲ್ ವಾಲ್ ಪೇಂಟಿಂಗ್ ಮಾಡಿಸಲಾಗಿದೆ. ಕೇವಲ ಹದಿನಾರು ದಿನದಲ್ಲಿ 40 ಲಕ್ಷಕ್ಕೂ ಹೆಚ್ಚು ಸದಸ್ಯತ್ವ ನೋಂದಣಿಯಾಗಿದ್ದು ದಾಖಲೆಯಾಗಿದೆ. ಮೋದಿಯುವರ 'ಮನ್ ಕಿ ಬಾತ್' ಕಾರ್ಯಕ್ರಕವುವು ಅತ್ಯಂತ ಯಶಸ್ವಿಯಾಗಿದ್ದು, 31,262 ಬೂತ್‌ಗಳಲ್ಲಿ 4 ಲಕ್ಷಕ್ಕೂ ಹೆಚ್ಚೂ ಕಾರ್ಯಕರ್ತರು 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಈ ಮೂರು ಕಾರ್ಯಕ್ರಮಗಳ ಪರಿಪೂರ್ಣ ಯಶಸ್ವಿಯಲ್ಲಿ ಆರಂಭವಾಗಿದ್ದು ವಿಜಯ ಸಂಕಲ್ಪ ಯಾತ್ರೆ. ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರದಲ್ಲೂ ಈ ಯಾತ್ರೆ ಯಶಸ್ವಿಯಾಗಿ ಪೂರೈಸಿ ಈಗ ದಾವಣಗೆರೆಯಲ್ಲಿ ಮುಕ್ತಾಯಗೊಂಡಿದೆ. ನಾಲ್ಕು ತಂಡದಲ್ಲಿ ನಾಲ್ಕು ದಿಕ್ಕಿನಲ್ಲಿ ಆರಂಭವಾದ ಈ ಯಾತ್ರೆಗೆ ಮಾರ್ಚ್ 1,2,3 ರಂದು ಕ್ರಮವಾಗಿ ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದಿಂದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ.ಪಿ.ನಡ್ಡಾ ಅವರು, ಕೇಂದ್ರದ ರಕ್ಷಣಾ ಸಚಿವರಾದ ಶ್ರೀ ರಾಜನಾಥ್ ಸಿಂಗ್ ಅವರು ಬೆಳಗಾವಿ ಜಿಲ್ಲೆಯ ನಂದಗಡದ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ ಸ್ಮಾರಕದಿಂದ, ಕೇಂದ್ರ ಗೃಹ ಸಚಿವರಾದ ಶ್ರೀ ಅಮಿತ್ ಶಾ ರವರು ಮಹಾತ್ಮ ಬಸವಣ್ಣನವರ ಕರ್ಮಭೂಮಿ, ವಿಶ್ವದ ಮೊದಲ ಸಂಸತ್ತು ಎಂಬ ಖ್ಯಾತಿಯ ಬೀದರ್ ಜಿಲ್ಲೆಯ ಬಸವ ಕಲ್ಯಾಣದ ಅನುಭವ ಮಂಟಪದಿಂದ, ನಾಡಪ್ರಭು ಕೆಂಪೇಗೌಡರ ಜನ್ಮ ಸ್ಥಳವಾದ ಬೆಂಗಳೂರಿನ ದೇವನಹಳ್ಳಿಯ ಬಳಿಯ ಆವತಿಯಲ್ಲಿ ನಾಲ್ಕು ಯಾತ್ರೆಗೆ ಚಾಲನೆ ನೀಡಿದ್ದರು. ರಾಜ್ಯದ ಎಲ್ಲಾ 224 ವಿಧಾನಸಭಾ ಕ್ಷೇತ್ರಗಳ್ಳೂ ನಾಲ್ಕು ತಂಡವಾಗಿ ಸಂಚರಿಸಿ ದಾವಣಗೆರೆಯಲ್ಲಿ ಸಂಗಮಗೊಂಡಿತು.

ರಾಷ್ಟ್ರ ನಾಯಕರು, ಇತರೆ ರಾಜ್ಯಗಳ ಮುಖ್ಯಮಂತ್ರಿಗಳು, ಕೇಂದ್ರ ಹಾಗೂ ರಾಜ್ಯದ ಸಚಿವರುಗಳು, ರಾಜ್ಯ ನಾಯಕರುಗಳು, ಶಾಸಕರು, ವಿಧಾನಪರಿಷತ್ ಸದಸ್ಯರು, ಯಾತ್ರೆ ನಿರ್ವಹಣಾ ತಂಡ, ರಾಜ್ಯ ಪದಾಧಿಕಾರಿಗಳು, ಜಿಲ್ಲಾ ಮಟ್ಟದ ನಾಯಕರು, ಪ್ರಮುಖರು, ಪದಾಧಿಕಾರಿಗಳು ಬೂತ್ ಮಟ್ಟದ ಜವಾಬ್ದಾರಿ ಹೊಂದಿದವರು ಹಾಗೂ ಸಕ್ರೀಯ ಕಾರ್ಯಕರ್ತರು ಯಾತ್ರೆಯುದ್ದಕ್ಕೂ ಭಾಗಿಯಾಗುವ ಮೂಲಕ ಯಾತ್ರೆ ಅಭೂತಪೂರ್ವ ಯಶಸ್ಸನ್ನು ಪಡೆಯಿತು. ಯಾತ್ರೆಗೆ ಸಾರ್ವಜನಿಕರು ನೀಡುತ್ತಿದ್ದ ವಿಶೇಷತೆಯಿಂದ ಕೂಡಿದ ಸ್ವಾಗತ, ಯಾತ್ರೆಯಲ್ಲಿ ಸೇರುತ್ತಿದ್ದ ಸಾರ್ವಜನಿಕರ ಸಂಖ್ಯೆ ಬಿಜೆಪಿ ರಾಜ್ಯದಲ್ಲಿ ಮತ್ತೆ ಸ್ಪಷ್ಟ ಬಹುಮತದೊಂದಿಗೆ ಅಧಿಕಾರ ಹಿಡಿಯುವ ಸಂಪೂರ್ಣ ಭರವಸೆಯನ್ನು ಮೂಡಿಸಿತು.

ಈ ಕಾರ್ಯಕ್ರಮಗಳಲ್ಲಿ 99% ನಾಯಕರುಗಳು ಹಾಗೂ ಕಾರ್ಯಕರ್ತರುಗಳು ಭಾಗಿಯಾಗುವ ಮೂಲಕ ಯಶಸ್ಸಿಗೆ ಕಾರಣಿಕರ್ತರಾಗಿದ್ದಾರೆ. ಜನರಲ್ಲಿದ್ದ ಆಡಳಿತ ವಿರೋಧಿ ಅಲೆಯನ್ನು ಹಿಮ್ಮೆಟ್ಟಿಸಿ ರಾಜ್ಯಕ್ಕೆ ಬಿಜೆಪಿಯೇ ಭರವಸೆ ಎಂದು ಸಾರ್ವಜನಿಕರಲ್ಲಿ ಭರವಸೆ ಮೂಡಿದ್ದು, ಇನ್ನೂ ಹೆಚ್ಚು ಬಲಪಡಿಸಿ ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಬಹುಮತದಿಂದ ವಿಜಯ ಸಾಧಿಸಿ ಸರ್ಕಾರವನ್ನು ರಚಿಸಲು ಚುನಾವಣಾ ಕಾರ್ಯದ ಯೋಜನೆಯನ್ನು ಸಿದ್ದಗೊಳಿಸಲಾಗುತ್ತಿದೆ.


ಬಸವನಬಾಗೇವಾಡಿ

ಬೆಳಗಾವಿ

ಭಟ್ಕಳ

ಗದಗ

ಹಾವೇರಿ

ಹಾನಗಲ್

ಚಳ್ಳಕೆರೆ

ಚಿಕ್ಕನಾಯಕನಹಳ್ಳಿ


ತಿಪಟೂರು


ಶಿಗ್ಗಾಂವ್


ಕುಂದಗೋಳ


ನವಲಗುಂದ


ಸಿಂಧಗಿ


ಸಿದ್ದಾಪುರ - ಸಿರ್ಸಿ


ಯಲ್ಲಾಪುರ


ವಿಜಯನಗರ




# ಬೆಂಗಳೂರಿನಲ್ಲಿ ಮೋದಿ ಸಂಚಲನ

(ವರದಿ)



**ಮಹೇಶ್ ಹೆಗಡೆ**
ಬಿಜೆಪಿ ಕಾರ್ಯಕರ್ತರು

ಪ್ರಧಾನಿ ಶ್ರೀ ಮೋದಿ ಅವರು ಬರುತ್ತಾರೆ ಅಂದರೆ ಹಾಗೆ ಒಂದು ತರ ಹಬ್ಬದ ವಾತಾವರಣ. ಅದರಲ್ಲೂ ಈ ಚುನಾವಣೆ ಸಮಯದಲ್ಲಿ ಮೋದಿ ಬರ್ತಾರೆ ಎಂದರೆ ಕಾರ್ಯಕರ್ತರಲ್ಲಿ ಉತ್ಸಾಹ ಮತ್ತು ಹುಮ್ಮಸ್ಸು. ಆ ಉತ್ಸಾಹ ಹುಮ್ಮಸ್ಸು ಮಾರ್ಚ್-25 ರಂದು ಬೆಂಗಳೂರು ಮತ್ತು ಚಿಕ್ಕಬಳ್ಳಾಪುರದಲ್ಲಿ ಕಂಡು ಬಂದಿತ್ತು. ಮೋದಿಯವರು ಕರ್ನಾಟಕಕ್ಕೆ ಆಗಮಿಸಿದ್ದರು. ದೇಹಲಿಯಿಂದ ಮಾರ್ಚ್-25 ರಂದು ಮೊದಲಿಗೆ ಬೆಂಗಳೂರಿಗೆ ಬಂದಿಳಿದ ಪ್ರಧಾನಿಯವರು ಚಿಕ್ಕಬಳ್ಳಾಪುರದ ಮುದ್ದೇನ ಹಳ್ಳಿ ಬಳಿಯ ಸತ್ಯ ಸಾಯಿ ಗ್ರಾಮದಲ್ಲಿ ಸುಮಾರು 400 ಕೋ.ರೂ. ವೆಚ್ಚದಲ್ಲಿ ನಿರ್ಮಿಸಲಾದ ಮಧು ಸೂದನ್ ಸಾಯಿ ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆಯನ್ನು ಉದ್ಘಾಟಿಸಿ ನಂತರ ಮತ್ತೆ ಬೆಂಗಳೂರಿಗೆ ಬಂದು ನಮ್ಮ ಮೆಟ್ರೋಗೆ ಚಾಲನೆ ನೀಡಿದರು.

ಚಿಕ್ಕಬಳ್ಳಾಪುರ: ಮಧು ಸೂದನ್ ಸಾಯಿ ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆಗೆ ಚಾಲನೆ ನೀಡಿ ಮಾತನಾಡಿದ ಶ್ರೀ ನರೇಂದ್ರ ಮೋದಿಯವರು, ನನ್ನ ಎಲ್ಲ ಸಹೋದರ, ಸಹೋದರಿಯವರಿಗೆ ನಮಸ್ಕಾರಗಳು ಎಂದು ಕನ್ನಡದಲ್ಲೇ ಭಾಷಣ ಆರಂಭಿಸಿದರು.



ಮುದ್ದೇನಹಳ್ಳಿ ವಿಶ್ವೇಶ್ವರಯ್ಯ ಜನ್ಮಸ್ಥಳವಾಗಿದೆ. ಇಂತಹ ಪುಣ್ಯಭೂಮಿಗೆ ಬಂದಿದ್ದು ನನ್ನ ಸೌಭಾಗ್ಯ ಎಂದು ಹೆಮ್ಮೆವ್ಯಕ್ತ ಪಡಿಸಿದರು.ಭಾರತವು ತನ್ನ ಅಜಾದಿ ಕಾ ಅಮೃತ್ ಮಹೋತ್ಸವದಲ್ಲಿ ಅಭಿವೃದ್ಧಿ ಹೊಂದಿದ ದೇಶವಾಗುವ ಹಾದಿಯಲ್ಲಿ ನಡೆಯಲು ನಿರ್ಧರಿಸಿ ಹೆಜ್ಜೆ ಇಟ್ಟಿದೆ. ಆದರೆ ಇಷ್ಟು ಕಡಿಮೆ ಅವಧಿಯಲ್ಲಿ ಈ ಸಾಧನೆಯನ್ನು ದೇಶ ಹೇಗೆ ಸ್ವೀಕರಿಸುತ್ತದೆ ಎಂಬ ಪ್ರಶ್ನೆಗಳು ಎದ್ದಿವೆ. ಅದು ಹೇಗೆ ಸಾಧ್ಯವಾಗುತ್ತದೆ? ಇಂತಹ ಪ್ರಶ್ನೆಗೆ ಒಂದೇ ಒಂದು ಉತ್ತರ ಎಲ್ಲರ ಪ್ರಯತ್ನ ಎಂದು ಹೇಳಿದರು.

ಕರ್ನಾಟಕ ಋಷಿಮುನಿಗಳು, ಆಶ್ರಮಗಳು, ಮಠ ಮಾನ್ಯಗಳ ಪರಂಪರೆಯ ಪುಣ್ಯ ಭೂಮಿಯಾಗಿದೆ. ಅದಕ್ಕೆ ಪ್ರಾಚೀನ ಸಂಪ್ರದಾಯಗಳು ಇಲ್ಲಿ ಹೆಚ್ಚು ಜೀವಂತವಾಗಿದೆ ಎಂದು ಆಶಯ ವ್ಯಕ್ತಪಡಿಸಿದರು. ಭಾರತದ ಅಭಿವೃದ್ಧಿ ಪಥದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಗಳು ಮಹತ್ತರವಾದ ಪಾತ್ರವನ್ನು ವಹಿಸುತ್ತಿವೆ, ಈ ಸಂಸ್ಥೆಗಳು ಕೇವಲ ಧರ್ಮ ಮತ್ತು ನಂಬಿಕೆಯ ಸಂದೇಶವನ್ನು ಹರಡಲು ಸಹಾಯ ಮಾಡಿಲ್ಲ. ಬಡವರು, ಹಿಂದುಳಿದವರು, ಮಹಿಳೆಯರು, ಬುಡಕಟ್ಟು ಮತ್ತು ಸಮಾಜದ ಇತರ ವರ್ಗಗಳ ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಿವೆ. ನಾಡಿನ ಜನಕ್ಕೆ ಶಿಕ್ಷಣ ಮತ್ತು ಆರೋಗ್ಯ ನೀಡುವ ಸಂಕಲ್ಪದ ಮೂಲಕ ಮಾನವೀಯತೆಯ ಸೇವೆಯ ಧ್ಯೇಯವನ್ನು ತೋರಿದೆ. ಈ ಸಾಧನೆ ಅದ್ಭುತವಾಗದೆ ಇದು ಇನ್ನೂ ಹೆಚ್ಚಾಗಲಿ ಎಂದು ಹಾರೈಸಿದರು.

**ಕನ್ನಡ ದೇಶದ ಗೌರವ ಹೆಚ್ಚಿಸಿದೆ:** ಕನ್ನಡ ಸೇರಿ ಪ್ರಾದೇಶಿಕ ಭಾಷೆಗೆ ನಮ್ಮ ಸರ್ಕಾರ ಒತ್ತು ನೀಡಿದೆ. ಕನ್ನಡ ಒಂದು ಸಮೃದ್ಧ ಹಾಗೂ ದೇಶದ ಗೌರವ ಹೆಚ್ಚಿಸುವ ಭಾಷೆಯಾಗಿದೆ. ಈ ಹಿಂದಿನ ಸರ್ಕಾರಗಳು ಎಂಜಿನಿಯರಿಂಗ್, ಮೆಡಿಕಲ್ ಮತ್ತು ತಾಂತ್ರಿಕ ಶಿಕ್ಷಣವನ್ನು ಕನ್ನಡ



ಸೇರಿದಂತೆ ಯಾವುದೇ ಪ್ರಾದೇಶಿಕ ಭಾಷೆಗಳಲ್ಲಿ ನೀಡಲು ಕ್ರಮ ಕೈಗೊಂಡಿರಲಿಲ್ಲ. ಆದರೆ, ಗ್ರಾಮೀಣ ಪ್ರದೇಶದ ಯುವಕ, ಯುವತಿಯರು ಎದುರಿಸುತ್ತಿರುವ ಸವಾಲುಗಳನ್ನು ನಮ್ಮ ಸರ್ಕಾರ ಅರ್ಥ ಮಾಡಿಕೊಂಡಿದೆ. ಹೀಗಾಗಿ ಕನ್ನಡ ಸೇರಿದಂತೆ ಎಲ್ಲ ಪ್ರಾದೇಶಿಕ ಭಾಷೆಗಳಲ್ಲೂ ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣ ಪಡೆಯಲು ಅವಕಾಶ ನೀಡಿದೆ ಎಂದು ತಿಳಿಸಿದರು.

ವಿಶ್ವೇಶ್ವರಯ್ಯ ಸಮಾಧಿಗೆ ನಮನ: ಕಾರ್ಯಕ್ರಮಕ್ಕೂ ಮೊದಲು ಮುದ್ದೇನಹಳ್ಳಿಯಲ್ಲಿರುವ ಸರ್.ಎಂ.ವಿಶ್ವೇಶ್ವರಯ್ಯರವ ಸಮಾಧಿ ಗೆ ಸ್ಥಳಕ್ಕೆ ಭೇಟಿ ನೀಡಿ ಪುಷ್ಪನಮನ ಸಲ್ಲಿಸಿದರು. ಬಳಿಕ ವಿಶ್ವೇಶ್ವರಯ್ಯ ಅವರು ವಾಸವಿದ್ದ ಮನೆ ಹಾಗೂ ಅವರು ಬಳಸುತ್ತಿದ್ದ ವಸ್ತುಗಳ ಮ್ಯೂಸಿಯಂಗೂ ಭೇಟಿ ನೀಡಿ ವೀಕ್ಷಣೆ ಮಾಡಿ ಸಂತಸ ವ್ಯಕ್ತಪಡಿಸಿದರು.



ನಮ್ಮ ಮೆಟ್ರೋಗೆ ಚಾಲನೆ

ನಮ್ಮ ಮೆಟ್ರೋದ ಮೊದಲ ಐಟಿ ಕಾರಿಡರ್ ಆಗಿರುವ ವೈಟ್ ಫೀಲ್ಡ್-ಕೆ.ಆರ್.ಪುರ ಮಾರ್ಗವನ್ನು ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಉದ್ಘಾಟಿಸಿ ಮೆಟ್ರೋದಲ್ಲಿ ಸಂಚಾರ ಮಾಡಿದರು. ರೂ.4249 ಕೋಟಿ ವೆಚ್ಚದಲ್ಲಿ ನಿರ್ಮಾಣವಾದ ನೇರಳೆ ಮಾರ್ಗದ ರೀಚ್-1 ರ ವಿಸ್ತತ 13.71 ಕಿ.ಮಿ ನೂತನ ಮೆಟ್ರೋ ಮಾರ್ಗವನ್ನು ಲೋಕಾರ್ಪಣೆಗೊಳಿಸಿದರು.







**ಜನಸಮಾನ್ಯರಂತೆ ಟಿಕೆಟ್ ಪಡೆದ ಮೋದಿ:** ನೂತನ ಮೆಟ್ರೋ ಮಾರ್ಗವನ್ನು ಲೋಕಾರ್ಪಣೆಗೊಳಿಸಿದ ನಂತರ ಮೆಟ್ರೋದಲ್ಲಿ ಸುಮಾರು 4 ಕಿ.ಮೀ ದೂರ ಸಂಚಾರವನ್ನು ನಡೆಸಿದರು. ಜನ ಸಮಾನ್ಯರಂತೆ ಟಿಕೆಟ್ ಕೌಂಟರ್‌ನಲ್ಲಿ ಮೊದಲ ಬಾರಿ ರುಪೇ ನ್ಯಾಷನಲ್ ಕಾಮನ್ ಮೊಬಿಲಿಟಿ ಕಾರ್ಡ್‌ನ್ನು ಪಡೆದು ಅಲಂಕೃತಗೊಂಡ ಮೆಟ್ರೋ ರೈಲಿನಲ್ಲಿ ಸಂಚರಿಸಿದರು.

**ವಿದ್ಯಾರ್ಥಿಗಳು ಮತ್ತು ಮೆಟ್ರೋ ಸಿಬ್ಬಂದಿಗಳ ಜೊತೆ ಮಾತುಕತೆ:** ಸುಮಾರು 4 ಕಿ.ಮೀ ನಷ್ಟು ಮೆಟ್ರೋದಲ್ಲಿ ಸಂಚಾರ ನಡೆಸುವ ಸಮಯದಲ್ಲಿ ಮೋದಿಯವರು ಕಾಡುಗೋಡಿ ಸಕಾರಿ ವಿದ್ಯಾರ್ಥಿಗಳ ಜೊತೆ ಮಾತುಕತೆ ನಡೆಸಿದರು. ಆಲ್ಲದೆ ಮೆಟ್ರೊದ ರೈಲಿನ ಚಾಲನಾ ವಿಭಾಗದ ಹಾಗೂ ಇತರೆ ಸಿಬ್ಬಂದಿಗಳ ಜೊತೆಗೆ ಮತ್ತು ಮೆಟ್ರೋದ ಸ್ವಚ್ಛತಾ, ಕಾರ್ಮಿಕ ಸಿಬ್ಬಂದಿಗಳ ಜೊತೆಗೆ ಚರ್ಚೆನಡೆಸಿದರು. ಹೇಗಿದ್ದೀರಿ?ಎಷ್ಟು ವರ್ಷದಿಂದ ಕೆಲಸ ಮಾಡುತ್ತಿದ್ದೀರಿ ಎಂದು ತಿಳಿದುಕೊಂಡರು. ಮೋದಿ ಜೊತೆ ಸಂಚರಿಸಿದ ವಿದಾರ್ಥಿಗಳ, ಸಿಬ್ಬಂದಿಗಳ ಮುಖದಲ್ಲಿ ಸಾಧನೆಯ ಮಂದಹಾಸ ಕಾಣುತ್ತಿತ್ತು.



## ದೇವರು ನಮ್ಮೂರಿಗೆ ಬಂದಿದ್ದಾರೆ ನೋಡಲು ಬಂದಿದ್ದೇವೆ:

ಕೆ.ಆರ್.ಪುರ-ವೈಟ್‌ಫೀಲ್ಡ್ ಮೆಟ್ರೋ ಮಾರ್ಗ ಸಂಚಾರದ ಉದ್ಘಾಟನೆಗೆ ಆಗಮಿಸಿದ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರನ್ನು ಕಣ್ಣುಂಬಿಕೊಳ್ಳಲು ವೈಟ್ ಫೀಲ್ಡ್ ಮಾರ್ಗದುದ್ದಕ್ಕೂ ಇಕ್ಕೆಲದಲ್ಲಿ ಜನರು ಸಂತೋಷದಿಂದ ಕಿಕ್ಕಿರಿದು ನೆರೆದಿದ್ದರು. ಯುವಕರು ಮತ್ತು ಮಹಿಳೆಯರು ಕೇಸರಿ ಪೇಟ ಧರಿಸಿ ದೇವರು ನಮ್ಮೂರಿಗೆ ಬಂದಿದ್ದಾರೆ ಅವರನ್ನು  ನೋಡಿ ನಾವು ಪುನಿತರಾಗಿದ್ದೇವೆ ಎಂದು ಹೇಳಿದರು. ಅಲ್ಲದೆ ಮೋದಿ ಪರ ಘೋಷಣೆ ಕೂಗಿದರು. ಮತ್ತೊಂದು ಸಾರಿ ಮೋದಿ ಸರ್ಕಾರ', ಏಕ್ ತೀನ್ ಚಾರ್ ಮೋದಿಜಿಕಿ ಜೈಜೈಕಾರ್', ಹರ ಹರ ಮೋದಿ', ಘರ್ ಘರ್ ಮೋದಿ' ಎಂದು ಘೋಷಣೆ ಕೂಗಿ ಮೊದಿಗೆ ಸ್ವಾಗತ ನೀಡಿದರು.











# ರಾಜ್ಯದಲ್ಲಿ ಸಂಚರಿಸುತ್ತಿರುವ ಪ್ರಗತಿ ರಥ

ರಾಜ್ಯ ವಿಧಾನಸಭಾ ಚುನಾವಣೆ 2023ರ ಸಿದ್ಧತೆಯು ಭರದಿಂದ ಸಾಗುತ್ತಿದೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಅನೇಕ ಜನಪರ ಯೋಜನೆಗಳನ್ನು ನೀಡಿ ಸಾಧನೆಗಳನ್ನು ಸಾಧಿಸಿದೆ. ಜನ ಸಮಾನ್ಯರಿಗೆ ಬೇಕಾಗಿರುವ ಅನೇಕ ಯೋಜನೆಗಳನ್ನು ಅವರ ಮನೆ ಬಾಗಿಲಿಗೆ ಯಾವುದೇ ಮಧ್ಯವರ್ತಿಗಳಿಲ್ಲದೇ ತಲುಪಿಸಿದೆ. ಜನಪರ ಯೋಜನೆಗಳನ್ನು ಜನ ಸಾಮಾನ್ಯರಿಗೆ ತಲುಪಿಸುವ ಮಹತ್ತರವಾದ ಕಾರ್ಯವನ್ನು ರಾಜ್ಯ ಬಿಜೆಪಿ 'ಪ್ರಗತಿ ರಥ' ಎಂಬ ಹೆಸರಿನ ಎಲ್‌ಇಡಿ ವಾಹನಗಳ ಮೂಲಕ ಕೈಗೊಂಡಿದೆ.

ಫೆಬ್ರವರಿ 24 ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಬಿಟಿಎಂ ವಿಧಾನಸಭಾ ಕ್ಷೇತ್ರದ ಸ್ವಾಮಿ ವಿವೇಕಾನಂದ ಆಟದ ಮೈದಾನದಲ್ಲಿ ಬಿಜೆಪಿ ಪ್ರಗತಿ ರಥ ಯಾತ್ರೆಗೆ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ಅವರು ಚಾಲನೆ ನೀಡಿ ಬಿಜೆಪಿಗೆ ಸಮರ್ಥ ನಾಯಕತ್ವವಿದ್ದು, ಜನರು ಬಿಜೆಪಿಯೇ ಭರವಸೆ ಎಂದು ನಂಬಿದ್ದಾರೆ ಎಂದು ಹೇಳಿದರು.

ಈ ಪ್ರಗತಿ ರಥಗಳು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ತಲುಪಿ ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ನೀಡಿದ ಜನಪರ ಯೋಜನೆಗಳ ಪ್ರದರ್ಶನವನ್ನು ಪ್ರಾರಂಭಿಸಿದೆ. ನಗರ ಪ್ರದೇಶಗಳಲ್ಲಿ ಎರಡು ಕ್ಷೇತ್ರಗಳಿಗೆ ಒಂದರಂತೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತೀ ಕ್ಷೇತ್ರಕ್ಕೆ ಒಂದರಂತೆ ಎಲ್‌ಇಡಿ ವಾಹನಗಳು ಸಂಚರಿಸುತಿವೆ. ಇಡೀ ರಾಜ್ಯದಲ್ಲಿ ಒಟ್ಟು 135 ಎಲ್‌ಇಡಿ ವಾಹನಗಳು ಸಂಚರಿಸಿ ಬಿಜೆಪಿಯ ಅಭಿವೃದ್ಧಿಯ ಪ್ರಗತಿಯನ್ನು ಸಾರುತ್ತಿವೆ. 58,000 ಬೂತ್‌ಗಳಿಗೂ ಬಿಜೆಪಿಯ ಅಭಿವೃದ್ಧಿಯ ಪ್ರಗತಿಯನ್ನು ತಲುಪಿಸು ಕಾರ್ಯ ಭರದಿಂದ ಸಾಗಿದೆ.

ಈ ರಥವು ಎಲ್‌ಇಡಿ ಸ್ಕ್ರೀನ್, ಈ ಸ್ಕ್ರೀನ್‌ನಿನಲ್ಲಿ ಐದು-ಆರು ವಿವಿಧ ಅಭಿವೃದ್ಧಿ ಕಾರ್ಯಗಳ ವಿಡಿಯೋಗಳನ್ನು ಪ್ರದರ್ಶನ ಮಾಡುವ ವ್ಯವಸ್ಥೆಯೊಂದಿಗೆ ಮೈಕ್, ಸ್ಪೀಕರ್ ಮೂಲಕ ಮಾತನಾಡುವ ವ್ಯವಸ್ಥೆ, ಇಂಟರ್‌ನೆಟ್, ಜಿಪಿಎಸ್ ಟ್ರ್ಯಾಕಿಂಗ್ ವ್ಯವಸ್ಥೆ ಮತ್ತು ಪ್ರಣಾಳಿಕಾ ಸಲಹಾ ಪೆಟ್ಟಿಗೆಯನ್ನು ಒಳಗೊಂಡಿದೆ.

ಒಟ್ಟು ಕಳೆದ ಒಂದು ತಿಂಗಳಿನಲ್ಲಿ 135 ವಾಹನಗಳು 38,327 ಸ್ಥಳಗಳಲ್ಲಿ ಪ್ರದರ್ಶನ ನಡೆಸಿದ್ದು, ಸುಮಾರು 10 ಲಕ್ಷಕ್ಕೂ ಹೆಚ್ಚು ಜನರನ್ನು ತಲುಪಿದೆ. ಪ್ರಸ್ತುತ ಈ ಕಾರ್ಯ ನಡೆಯುತ್ತಿದ್ದು ಲಕ್ಷಾಂತರ ಜನರನ್ನು ತಲುಪುವ ಗುರಿಯನ್ನು ಹೊಂದಿದೆ.





### ಕೇಂದ್ರ ಗೃಹ ಸಚಿವರಾದ

# ಶ್ರೀ ಅಮಿತ್ ಶಾ ಅವರ ಕರ್ನಾಟಕ ಪ್ರವಾಸ

**ಬೀದರ್**

> **ಮುಸ್ಲಿಮರ ಮೀಸಲು** ಲಿಂಗಾಯತ, ಒಕ್ಕಲಿಗರಿಗೆ **ಹಂಚಿ ನ್ಯಾಯ**
>
> **4% 2ಬಿ ಮೀಸಲು ರದ್ದು**ಗೊಳಿಸಿದ್ದು ಬೊಮ್ಮಾಯಿ ಸರ್ಕಾರದ **ಐತಿಹಾಸಿಕ ಕ್ರಮ**
>
> ಹಿಂದೆ **ಮುಸ್ಲಿಮರ ಓಲೈಕೆಗಾಗಿ ಹೆಚ್ಚಿನ ಮೀಸಲು** ನೀಡಿದ್ದು **ಸಂವಿಧಾನಕ್ಕೆ ವಿರುದ್ಧ**
>
> **- ಅಮಿತ್ ಶಾ**
> ಮಾನ್ಯ ಕೇಂದ್ರ ಗೃಹ ಸಚಿವರು

ರಾಜ್ಯದಲ್ಲಿ ಮುಸ್ಲಿಮರಿಗೆ 2ಬಿ ಅಡಿ ಇದ್ದ ಶೇ. 4ರಷ್ಟು ಮೀಸಲಾತಿ ರದ್ದು ಮಾಡಿದ ಸರ್ಕಾರದ ಕ್ರಮವನ್ನು ಕೇಂದ್ರ ಗೃಹ ಸಚಿವರಾದ ಶ್ರೀ ಅಮಿತ್ ಶಾ ಪ್ರಬಲವಾಗಿ ಸಮರ್ಥಿಸಿದ್ದಾರೆ. ಕರ್ನಾಟಕದಲ್ಲಿ ಮುಸ್ಲಿಮರಿಗೆ ನೀಡಿದ್ದ ಮೀಸಲು ಸಂವಿಧಾನ ಬಾಹಿರವಾಗಿತ್ತು. ಇದನ್ನು ರದ್ದು ಮಾಡಿ ಲಿಂಗಾಯತ, ಒಕ್ಕಲಿಗರಿಗೆ ಹಂಚಿಕೆ ಮಾಡಿ ಎಲ್ಲರಿಗೂ ನ್ಯಾಯ ಒದಗಿಸಲಾಗಿದೆ, ಇದು ಐತಿಹಾಸಿಕ ಕ್ರಮ ಎಂದು ಹೇಳಿದ್ದಾರೆ.

ಬೀದರ್ ಜಿಲ್ಲೆಯ ಹುಲಸೂರು ತಾಲೂಕಿನ ಗೋರ್ಟಾ(ಬಿ) ಗ್ರಾಮದಲ್ಲಿ ಭಾನುವಾರ ಹುತಾತ್ಮರ ಸಾರಕ, ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಪ್ರತಿಮೆ ಹಾಗೂ ಧ್ವಜಸ್ತಂಭ ಅನಾವರಣಗೊಳಿಸಿ, ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಗಟ್ಟೂರು ಗ್ರಾಮದಲ್ಲಿ 4,000 ಕೋ.ರೂ. ಗೂ ಹೆಚ್ಚಿನ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಕಾರ್ಯಕ್ರಮ ಉದ್ಘಾಟಿಸಿ, ಬೆಂಗಳೂರಿನ ವಿಧಾನಸೌಧ ಎದುರು ಬಸವಣ್ಣ, ಕೆಂಪೇಗೌಡ ಪ್ರತಿಮೆ ಅನಾವರಣಗೊಳಿಸಿ ಅವರು ಮಾತನಾಡಿದರು.

ಸಂವಿಧಾನ ನೀಡಿರುವ ಮೀಸಲಾತಿ ಸೌಕರ್ಯವನ್ನು ಕೆಲ ಧರ್ಮಗಳಷ್ಟೇ ಈವರೆಗೆ ಬಳಸಿಕೊಳ್ಳುತ್ತಿದ್ದವು. ಸಂವಿಧಾನದಲ್ಲಿ ಧರ್ಮ ಆಧಾರಿತ ಮೀಸಲಿಗೆ ಅವಕಾಶವಿಲ್ಲ, ಕಾಂಗ್ರೆಸ್‌ನ ತುಷ್ಟಿಕರಣ, ಮತ ಬ್ಯಾಂಕ್ ಆಸೆಯಿಂದ ಮುಸ್ಲಿಮರಿಗೆ 2ಬಿ ಅಡಿ ಮೀಸಲಾತಿ ನೀಡಲಾಗಿತ್ತು. ಆದರೆ ಕರ್ನಾಟಕದಲ್ಲಿ ಮುಸ್ಲಿಮರಿಗೆ 2 ಬಿ ಅಡಿ ನೀಡಿದ್ದ ಶೇ. 4ರಷ್ಟು ಮೀಸಲಾತಿಯನ್ನು ತಲಾ ಶೇ. 2ರಷ್ಟು ಲಿಂಗಾಯತರು, ಒಕ್ಕಲಿಗರಿಗೆ ಹಂಚಿಕೆ ಮಾಡಿದ್ದು ಶ್ಲಾಘನೀಯ, ಸಮರ್ಥನೀಯ ಎಂದು ಹೇಳಿದರು. ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದ ಮೀಸಲಾತಿ ಹಂಚಿಕೆಯ ನಿರ್ಧಾರ ಅತ್ಯುತ್ತಮವಾಗಿದೆ, ಇದರ ಜತೆಗೆ ಸರ್ಕಾರ ಪರಿಶಿಷ್ಟ ಜಾತಿಗಳು ಬಹುದಿನಗಳ ಬೇಡಿಕೆ ಯಾದ ಒಳ ಮೀಸಲಾತಿಯನ್ನೂ ಕಲ್ಪಿಸಿ ಕೊಟ್ಟಿರುವುದು ಸ್ತುತ್ಯರ್ಹ ಎಂದು ತಿಳಿಸಿದರು.




# ಶಕ್ತಿಸೌಧದೆದುರು ಬಸವಣ್ಣ, ಕೆಂಪೇಗೌಡ ಪ್ರತಿಮೆ
# ಶ್ರೀ ಅಮಿತ್ ಶಾರಿಂದ ಉದ್ಘಾಟನೆ

## ಬಸವೇಶ್ವರ, ಕೆಂಪೇಗೌಡರ ತತ್ವ ವಿಧಾನಸಭೆಗೆ ಆರಿಸಿ ಬರುವವರಿಗೆ ಆದರ್ಶವಾಗಲಿ

ಬಸವಣ್ಣನವರು ಸಾರಿದ ಸಾಮಾಜಿಕ ನ್ಯಾಯ ಹಾಗೂ ಸರ್ವರೂ ಸಮಾನರೆಂಬ ತತ್ವಾದರ್ಶಗಳು ಮತ್ತು ಆ ತತ್ವಗಳಡಿ ನಾಡಪ್ರಭು ಕೆಂಪೇಗೌಡರು ನಡೆಸಿದ ಉತ್ತಮ ಆಡಳಿತ ಮತ್ತು ಅಭಿವೃದ್ಧಿಯ ಮಂತ್ರ ಭವಿಷ್ಯದಲ್ಲಿ ಕರ್ನಾಟಕ ವಿಧಾನ ಸಭೆಗೆ ಚುನಾಯಿತರಾಗಿ ಬರುವ ಎಲ್ಲ ಜನಪ್ರತಿನಿಧಿಗಳಿಗೆ ಆದರ್ಶವಾಗಬೇಕು. ಕರ್ನಾಟಕದ ಮೂಲಕ ಇಡೀ ದೇಶ ಹಾಗೂ ಜಗತ್ತಿಗೇ ಈ ಮಹಾಪುರುಷರ ತತ್ವ, ಆದರ್ಶ ಹಾಗೂ ಆಡಳಿತಗಳ ಸಂದೇಶ ಸಾರುವಂತಾಗಬೇಕು ಕೇಂದ್ರ ಗೃಹ ಸಚಿವ ಶ್ರೀ ಅಮಿತ್ ಶಾ ಹೇಳಿದರು.

ವಿಧಾನಸೌಧದ ಮುಂಭಾಗದಲ್ಲಿ ಸ್ಥಾಪಿಸಿರುವ ಜಗಜ್ಯೋತಿ ಬಸವೇಶ್ವರ ಹಾಗೂ ನಾಡಪ್ರಭು ಕೆಂಪೇಗೌಡರ ಪ್ರತಿಮೆಗಳ ಅನಾವರಣ ಹಾಗೂ ನಮ್ಮ ಬೆಂಗಳೂರು ಹಬ್ಬದ ಸಮಾರೋಪ ಸಮಾರಂಭ ಉದ್ದೇಶಿಸಿ ಮಾತನಾಡಿದ ಅವರು, ಬಸವೇಶ್ವರರು ಅನುಭವ ಮಂಟಪದಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಯಿಂದ ಉನ್ನತ ಸ್ತರದ ವ್ಯಕ್ತಿಗಳೆಲ್ಲರನ್ನೂ ಒಂದೆಡೆ ಸೇರಿಸಿದ್ದರು. ಚರ್ಚೆಗೆ ಅವಕಾಶ ನೀಡಿ ಸಮಾನತೆ, ಸಾಮಾಜಿಕ ನ್ಯಾಯದ ಮೂಲಕ ಸಮಾಜದ ಸಶಕ್ತೀಕರಣ ಸಾಧ್ಯ ಎಂದು ತೋರಿಸಿಕೊಟ್ಟವರು. ಕೆಂಪೇಗೌಡರು ಇದೇ ಸಮಾನತೆ, ಸಾಮಾಜಿಕ ನ್ಯಾಯದ ತಳಹದಿ ಮೇಲೆ ಬೆಂಗಳೂರು ನಗರ ನಿರ್ಮಾಣ ಮಾಡಿ ಉತ್ತಮ ಆಡಳಿತ ಮತ್ತು ಅಭಿವೃದ್ಧಿ ಮಾಡಿ ತೋರಿಸಿದವರು, ಹಾಗಾಗಿ ಈ ಮಹಾ ಪುರುಷರ ಪ್ರತಿಮೆಗಳನ್ನು ತನ್ನದೇ ಇತಿಹಾಸವಿರುವ ಕರ್ನಾಟಕದ

ಶಕ್ತಿಕೇಂದ್ರ ವಿಧಾನಸೌಧದ ಮುಂದೆ ಸ್ಥಾಪಿಸಲಾಗಿದೆ. ಈ ಇಬ್ಬರೂ ಮಹಾ ಪುರುಷರ ತತ್ವ, ಆದರ್ಶಗಳು, ಆಡಳಿತ'ಮತ್ತು ಅಭಿವೃದ್ಧಿಯ ಮಂತ್ರಗಳು ಮುಂದೆ ವಿಧಾನಸಭೆಗೆ ಆರಿಸಿ ಬರುವ ಎಲ್ಲರಿಗೂ ಆದರ್ಶಪ್ರಾಯವಾಗ ಬೇಕು, ಕರ್ನಾಟಕದ ಮೂಲಕ ಇಡೀ ದೇಶಕ್ಕೆ ಅವರ ತತ್ವ ಆದರ್ಶ ಸಾರಬೇಕು ಎಂದು ಹೇಳಿದರು.

ಭಾರತ ಲೋಕತಂತ್ರದ ಜನನಿ, ಅದು 12ನೇ ಶತಮಾನದ ವಚನಕಾರರ ಅನುಭವಮಂಟಪದ ಮೂಲಕ ಆರಂಭವಾಗುತ್ತದೆ, ಅಲ್ಲಿ ಸಾಮಾಜಿಕ ನ್ಯಾಯದ ಜತೆಗೆ ಸಮಾನ ಸ್ಥಾನ ಮಹಿಳೆಯರಿಗೂ ನೀಡಲಾಗುತ್ತದೆ, ವಚನಕಾರರ ವಚನಗಳು ನಮ್ಮ ಜೀವನಕ್ಕೆ ಆದರ್ಶವಾಗಬೇಕು, ಕೆಂಪೇಗೌಡರ ತಾಕತ್ತು ಅವರ ಧ್ವನಿಯಲ್ಲಿರಲಿಲ್ಲ, ಬದಲಿಗೆ ಅವರ ಆಡಳಿತ ವೈಖರಿ, ಆಚಾರ ವಿಚಾರಗಳಲ್ಲಿತ್ತು ಎಂದು ತಿಳಿಸಿದರು. ನದಿ, ಸರೋವರದಂತಹ ಯಾವುದೇ ನೀರಿನ ಮೂಲ ಇಲ್ಲದ ಕಡೆ ನಗರವನ್ನು ನಿರ್ಮಿಸಿ ಅಲ್ಲಿ ನೂರಾರು ಕೆರೆಗಳು, ಉದ್ಯಾನಗಳನ್ನು ಕಟ್ಟಿ ನೀರು ಹಾಗೂ ಪರಿಸರದ ಮಹತ್ವವನ್ನು ಇಡೀ ಜಗತ್ತಿಗೆ ಸಾರಿದವರು ಸ್ಥಾಪಿಸಿದ ನಗರ ಇಂದು ವಿಶ್ವಮಾನ್ಯವಾಗಿ ಬೆಳೆದಿರುವುದೇ ಇದಕ್ಕೆ ಸಾಕ್ಷಿ. ಇಂದು ಬೆಂಗಳೂರು ವಿದೇಶಿ ಬಂಡವಾಳ ಹೂಡಿಕೆ, ರಕ್ಷಣಾ ಕ್ಷೇತ್ರ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಠದ ಡಾ. ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಸ್ಪೀಕರ್ ಶ್ರೀ ಕಾಗೇರಿ, ಸಭಾಪತಿ ಶ್ರೀ ಹೊರಟ್ಟಿ, ಪೇಜಾವರ ಶ್ರೀ ಸಿದ್ದಗಂಗಾ ಶ್ರೀ, ಹರಿಹರ ಶ್ರೀ, ಮಾದಾರಚನ್ನಯ್ಯ ಸ್ವಾಮೀಜಿ, ಸಚಿವರಾದ ಶ್ರೀ ಆರ್.ಅಶೋಕ್, ಶ್ರೀ ನಿರಾಣಿ, ಡಾ.ಅಶ್ವತ್ಥನಾರಾಯಣ ಹಾಗೂ ಡಾ.ಕೆ.ಸುಧಾಕರ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



## ವಿಧಾನಸೌಧ 'ಅನುಭವ ಮಂಟಪ' ಆಗಲಿ ...

ರಾಜ್ಯ ಏಕೀಕರಣಗೊಂಡ ಮೊದಲ ಹತ್ತು ವರ್ಷಗಳಲ್ಲಿಯೇ ವಿಧಾನಸೌಧದ ಮುಂಭಾಗದಲ್ಲಿ ಶ್ರೀ ಬಸವಣ್ಣ ಹಾಗೂ ನಾಡಪ್ರಭು ಕೆಂಪೇಗೌಡರ ಪ್ರತಿಮೆಗಳ ಸ್ಥಾಪನೆಯಾಗಬೇಕಿತ್ತು. ಆದರೆ ಇಷ್ಟು ದಿನ ತೆಗೆದುಕೊಂಡಿದ್ದಕ್ಕೆ ಯಾರನ್ನೂ ದೂಷಿಸುವುದಿಲ್ಲ, ನಮ್ಮ ನಮ್ಮ ಆತ್ಮಸಾಕ್ಷಿಗಳಿಗೆ ಬಿಡುತ್ತೇನೆ. ನಾವು ಕೇವಲ 75 ದಿನಗಳಲ್ಲಿ ಈ ಪ್ರತಿಮೆಗಳನ್ನು ನಿರ್ಮಾಣ ಮಾಡಿದೇವೆ. ವಿಧಾನ ಸೌಧ ಆಧುನಿಕ ಮಂಟಪ, 12ನೇ ಶತಮಾನದ ಅನುಭವ ಮಂಟಪದ ತತ್ವ ಆದರ್ಶ, ವೈಚಾರಿಕತೆಗಳು ಇಲ್ಲಿ ಇನ್ನಷ್ಟು ಸಾಕಾರಗೊಳ್ಳಲಿ. ಈ ಪ್ರತಿಮೆಗಳು ಹೈಕೋರ್ಟ್ ಎದುರಿಗಿದ್ದು ಅಲ್ಲಿಯೂ ಅವರ ತತ್ವ ಆದರ್ಶ, ವಿಚಾರಗಳು ನಿರಂತರವಾಗಿ ಸಾಗಲಿ. ನಾಡಪ್ರಭು ಕೆಂಪೇಗೌಡರ ಆದರ್ಶಗಳು ಸದಾ ಕಾಲ ಸ್ಫೂರ್ತಿಯಾಗಲಿ. ಈ ಪ್ರತಿಮೆಗಳನ್ನು ನಿರ್ಮಿಸುವ ಉಸ್ತುವಾರಿ ವಹಿಸಿದ್ದ ಸಚಿವ ಶ್ರೀ ಆರ್.ಅಶೋಕ್, ಪ್ರತಿಮೆಗಳನ್ನು ನಿರ್ಮಿಸಿದ ಜಾಹ್ನವಿ ಕಲಾ ಸಂಸ್ಥೆ ಹಾಗೂ ಸಿವಿಲ್ ಕಾಮಗಾರಿ ಪೂರ್ಣ ಗೊಳಿಸಿದ ತಂಡಗಳಿಗೆ ಅಭಿನಂದನೆ

**– ಬಸವರಾಜ ಬೊಮ್ಮಾಯಿ,**
**ಮಾನ್ಯ ಮುಖ್ಯಮಂತ್ರಿಗಳು**



## ಬಹಳ ವರ್ಷಗಳ ಕನಸು ಸಾಕಾರ...

**– ಬಿ.ಎಸ್. ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿಗಳು**

ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ಮಾತನಾಡಿ, ಬಸವೇಶ್ವರ ಹಾಗೂ ಕೆಂಪೇಗೌಡರ ಪ್ರತಿಮೆಗಳನ್ನು ವಿಧಾನಸೌಧದ ಎದುರು ಸ್ಥಾಪಿಸಬೇಕೆಂಬುದು ನನ್ನ ಬಹಳವರ್ಷಗಳ ಕನಸಾಗಿತ್ತು. ಅದು ಇಂದು ನನಸಾಗಿರುವುದು ಸಂತಸ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು. 12ನೇ ಶತಮಾನದಲ್ಲಿಯೇ ವಚನಗಳ ಮೂಲಕ ಸಾಮಾಜಿಕ ಕ್ರಾಂತಿ ಮಾಡಿದ ಬಸವಣ್ಣನವರು ಜನಿಸಿದ ಈ ನಾಡಿನಲ್ಲಿ ಜನಿಸಿರುವ ನಾವೆಲ್ಲ ಪುಣ್ಯವಂತರು. ಬೆಂಗಳೂರು ಕಟ್ಟಿದ ಕೆಂಪೇಗೌಡರು ಹಲವಾರು ಕೆರೆ, ಕಟ್ಟೆಗಳನ್ನು ನಿರ್ಮಿಸಿ ದೂರದೃಷ್ಟಿಯ ಮೂಲಕ ಬೆಂಗಳೂರು ಅಭಿವೃದ್ಧಿಗೆ ಮುನ್ನುಡಿ ಬರೆದಿದ್ದರು. ಈ ಮಹಾನ್ ನಾಯಕರ ತತ್ವ, ಆದರ್ಶಗಳನ್ನು ನಾವೆಲ್ಲರೂ ಅಳವಡಿಸಿಕೊಂಡು ಪಾಲಿಸಬೇಕು ಎಂದು ತಿಳಿಸಿದರು.



ಬಸವಣ್ಣನವರು 12ನೇ ಶತಮಾನದ 'ಅನುಭವ ಮಂಟಪ'ದ ಮೂಲಕ ಪ್ರಜಾಪ್ರಭುತ್ವಕ್ಕೆ ಬುನಾದಿ ಹಾಕಿದ ಸಮಾನತೆಯ ಹರಿಕಾರರು. ತಮ್ಮ ವಚನಗಳ ಮೂಲಕ ಸಮಾಜದಲ್ಲಿ ಮೇಲು ಕೀಳು, ಜಾತೀಯತೆಯನ್ನು ತೊಡೆದು ಹಾಕಲು ಅರಿವು ಮೂಡಿಸಿದಂಥ ಮಹಾನ್ ವ್ಯಕ್ತಿಯ ಪುತ್ಥಳಿ ವಿಧಾನಸೌಧದ ಆವರಣದಲ್ಲಿ ಸ್ಥಾಪಿಸಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮುಕುಟ ಪ್ರಾಯ. ಕೆಂಪೇಗೌಡರು ನಿರ್ಮಿಸಿದ ಬೆಂಗಳೂರು ನಗರ ರಾಜ್ಯದ ರಾಜಧಾನಿಯಾಗಿರುವುದಲ್ಲದೆ ದೇಶದ ಪ್ರಮುಖ ನಗರಗಳಲ್ಲಿ ಒಂದಾಗಿದೆ. ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದರೂ ಅವರ ಪ್ರತಿಮೆಯನ್ನು ವಿಧಾನಸೌಧದ ಮುಂದೆ ಸ್ಥಾಪಿಸಿರಲಿಲ್ಲ. ಅದನ್ನು ನಮ್ಮ ಸರ್ಕಾರ ಮಾಡಿದೆ. ಮಹನೀಯರ ಪುತ್ಥಳಿ ನಿರ್ಮಾಣ ಕಾರ್ಯದ ಹೊಣೆಯನ್ನು ಕಾಲಮಿತಿಯಲ್ಲಿ ನಿಭಾಯಿಸಿದ್ದು ಆತ್ಮತೃಪ್ತಿ ತಂದಿದೆ.

**– ಆರ್. ಅಶೋಕ, ಕಂದಾಯ ಸಚಿವರು**





**ಬಹುವರ್ಷಗಳಿಂದ ನೆನಗುದಿಗೆ ಬಿದ್ದಿದ್ದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ದಲಿತ ಜನಾಂಗದ ಒಳ ಮೀಸಲಾತಿಯನ್ನೂ ಹಾಗೂ ಹಿಂದುಳಿದ ವರ್ಗಗಳ ಮೀಸಲಾತಿಯ ಪ್ರಮಾಣವನ್ನು. ಪರಿಷ್ಕರಿಸಿ ಆದೇಶ ಮಾಡಿದ ಶ್ರೀ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರಕಾರ**

| | |
|---|---|
| ಎಸ್ಸಿ ಎಡಗೈ ಜನಾಂಂಗ | 6% |
| ಎಸ್ಸಿ ಬಲಗೈ ಜನಾಂಗ | 5.5% |
| ಬಂಜಾರ, ಬೋವಿ, ಕೊರಚ, ಕೊರಮ ಜನಾಂಗ | 4.5% |
| ಅಲೆ ಮಾರಿ ಸಣ್ಣ ಜನಾಂಗ | 1% |
| ಹಿಂದುಳಿದ ವರ್ಗ (ಪ್ರವರ್ಗ - 1) | 4% |
| ಹಿಂದುಳಿದ ವರ್ಗ (ಪ್ರವರ್ಗ - 2) | 15% |
| ಹಿಂದುಳಿದ ವರ್ಗ (ಪ್ರವರ್ಗ - 2ಸಿ) (ಒಕ್ಕಲಿಗ, ರೆಡ್ಡಿ, ಬಲಿಜ ಸೇರಿ 12 ಜಾತಿ) | 6% |
| ಹಿಂದುಳಿದ ವರ್ಗ (ಪ್ರವರ್ಗ - 2ಡಿ) (ಪಂಚಮಸಾಲಿ, ವೀರಶೈವ ಲಿಂಗಾಯಿತ ಮತ್ತು ಇತರರು) | 7% |

# ಬಿಜೆಪಿ ಸರಕಾರದಿಂದ ಐತಿಹಾಸಿಕ ನಿರ್ಧಾರ

ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಇತಿಹಾಸದಲ್ಲಿ ಪರಿಶಿಷ್ಟ ಜಾತಿಗಳ ಒಳ ಪಂಗಡಗಳ ಮೀಸಲಾತಿಯ ವಿಚಾರದಲ್ಲಿ ಒಂದು ಐತಿಹಾಸಿಕ ನಿರ್ಣಯ ತೆಗೆದುಕೊಂಡಿದೆ.

ರಾಜ್ಯ ಸರಕಾರ ತೆಗೆದುಕೊಂಡ ಹೊಸ ಮೀಸಲಾತಿ ನಿರ್ಣಯದ ಅನುಸಾರ ರಾಜ್ಯದ ಒಕ್ಕಲಿಗರಿಗೆ ಪ್ರವರ್ಗ 2 ಸಿ ಅಡಿಯಲ್ಲಿ ಹಿಂದಿನ ಶೇ. 4 ರಿಂದ 6ಕ್ಕೆ ಹೆಚ್ಚಳ, ಲಿಂಗಾಯತ ಸಮಾಜಕ್ಕೆ ಪ್ರವರ್ಗ 2 ಡಿ ಅಡಿಯಲ್ಲಿ ಶೇ. 5 ರಿಂದ 7ಕ್ಕೆ ಹೆಚ್ಚಳ ಮಾಡಿದೆ. ಸಂವಿಧಾನ ಬಾಹಿರವಾಗಿ ಇಷ್ಟು ದಿನ ಜಾರಿಯಲ್ಲಿದ್ದ ಧರ್ಮಾಧಾರಿತವಾಗಿದ್ದ ಶೇ. 4 ರ ಮುಸ್ಲೀಮ್ ಮೀಸಲಾತಿಯನ್ನು ರದ್ದು ಮಾಡಿ ಅವರಿಗೆ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಅಡಿಯಲ್ಲಿ ಮೀಸಲಾತಿ ಕಲ್ಪಿಸಲಾಗಿದೆ.






ಎಸ್ಸಿ ಸಮುದಾಯಗಳಿಗೆ ಹಿಂದೆ ಇದ್ದ ಶೇ. 15 ಮೀಸಲಾತಿಯನ್ನು 17ಕ್ಕೆ ಏರಿಸಿ ಅಲ್ಲಿ ಒಳ ಮೀಸಲಾತಿಯನ್ನು ದಲಿತ ಎಡಗೈ ಸಮುದಾಯಕ್ಕೆ ಶೇ. 6, ದಲಿತ ಬಲಗೈ ಸಮುದಾಯಕ್ಕೆ ಶೇ. 5.5 ಸ್ಪೃಶ್ಯ ದಲಿತ ಸಮುದಾಯಕ್ಕೆ ಶೇ. 4.5 ಹಾಗೂ ಇತರರಿಗೆ ಶೇ. 1 ರಷ್ಟು ಹಂಚಿಕೆಯನ್ನು ಮಾಡಿದೆ. ಹೀಗೆ ಸಮಾಜದ ಎಲ್ಲಾ ವರ್ಗಕ್ಕೂ ಸಾಮಾಜಿಕ ನ್ಯಾಯ ಒದಗಿಸುವ ಕೆಲಸ ಬಿಜೆಪಿ ಸರ್ಕಾರ ಮಾಡಿದೆ.

ಕಳೆದ ಮೂವತ್ತು ವರ್ಷಗಳಿಂದ ರಾಜ್ಯದಲ್ಲಿ ದಲಿತ ಸಮುದಾಯಗಳೂ ಸೇರಿದಂತೆ ಅನೇಕ ಇತರೆ ಸಮುದಾಯಗಳು ಅವರ ಜನಸಂಖ್ಯಾ ಅನುಪಾತಕ್ಕೆ ಅನುಗುಣವಾಗಿ ಒಳ ಮೀಸಲಾತಿ ಒದಗಿಸಬೇಕು ಎಂದು ಹಕ್ಕೊತ್ತಾಯ ಮಾಡುತ್ತಲೇ ಬಂದಿದ್ದಾರೆ. ಹಿಂದಿನ ಶ್ರೀ ಧರ್ಮಸಿಂಗ್ ನೇತೃತ್ವದ ಸರ್ಕಾರ ನ್ಯಾಯಮೂರ್ತಿ ಎ.ಜೆ. ಸದಾಶಿವ ಅವರ ಅಧ್ಯಕ್ಷತೆಯಲ್ಲಿ ಆಯೋಗವನ್ನು ರಚನೆ ಮಾಡಿತ್ತು. ಸುಮಾರು ಏಳು ವರ್ಷಗಳ ಕಾಲ ಅಧ್ಯಯನ ಮಾಡಿ 2012ರಲ್ಲಿ ಸರಕಾರಕ್ಕೆ ವರದಿಯನ್ನು ಸಲ್ಲಿಸಿತ್ತು. ಆದರೆ ಈ ಆಯೋಗದ ವರದಿ ಬಗ್ಗೆ ಬಹಳಷ್ಟು ಸಮುದಾಯಗಳು ಅಸಮಧಾನವನ್ನು ವ್ಯಕ್ತಪಡಿಸಿದ್ದವು.

2011ರ ಜನಗಣತಿಯ ದತ್ತಾಂಶ ಮತ್ತು ಸದಾಶಿವ ಆಯೋಗದ ವರದಿಯಲ್ಲಿರುವ ದತ್ತಾಂಶಗಳಲ್ಲಿ ಬಹಳಷ್ಟು ವ್ಯತ್ಯಾಸವಿದ್ದು, ಸದಾಶಿವ ಆಯೋಗದ ವರದಿ ಶಿಫಾರಸುಗಳು ಅನೇಕ ಒಳ ಸಮುದಾಯಗಳು ಮತ್ತು ದುರ್ಬಲ ಸಮುದಾಯಗಳ ಜನಸಂಖ್ಯಾ ಅನುಪಾತಕ್ಕೆ ಸರಿಯಾಗಿ ಮೀಸಲಾತಿ ಪ್ರಮಾಣವನ್ನು ಸೂಚಿಸಿಲ್ಲ ಎನ್ನುವುದರ ಜೊತಗೆ ಒಂದಷ್ಟು ಸಮುದಾಯಗಳನ್ನು ಈ ಮೀಸಲಾತಿ ಪಟ್ಟಿಯಿಂದಲೇ ತೆಗೆದುಹಾಕಬೇಕೆಂಬ ಶಿಫಾರಸನ್ನು ಮಾಡಿದೆ ಎಂಬ ಅನುಮಾನವನ್ನೂ ವ್ಯಕ್ತಪಡಿಸಿದ್ದರು. ಆ ಕಾರಣಕ್ಕೆ ಸದಾಶಿವ ಆಯೋಗದ ವರದಿಗಳು ಜಾರಿಯಾಗಬಾರದೆಂದು ಅನೇಕ ಸಮುದಾಯಗಳು ಪಟ್ಟು ಹಿಡಿದಿದ್ದವು.

ನಂತರ ಪರಿಶಿಷ್ಟ ಪಂಗಡದ ಜನಸಂಖ್ಯಾ ಅನುಪಾತದ ಮೇಲೆ ಒಳ ಮೀಸಲಾತಿ ಕೊಡಬೇಕು ಎಂಬ ಒತ್ತಡ ಹೆಚ್ಚಾದಾಗ ಸರ್ಕಾರ ನ್ಯಾಯಮೂರ್ತಿ ನಾಗಮೋಹನ ದಾಸ್ ಅವರ ಏಕ ಸದಸ್ಯ ಸಮಿತಿಯನ್ನು ರಚನೆ ಮಾಡಿ ವರದಿ ಕೊಡುವಂತೆ ಅಂದಿನ ಸರಕಾರ ಆದೇಶ ಹೊರಡಿಸಿತ್ತು. ಆ ಆಯೋಗ 2018ರಲ್ಲೇ ವರದಿಯನ್ನೂ ಕೊಟ್ಟಿತು. ಆ ಆಯೋಗ ಪರಿಶಿಷ್ಟ ಜಾತಿಗೆ ಮೀಸಲಾತಿಯನ್ನು ಶೇ.15 ರಿಂದ ಶೇ. 17ಕ್ಕೆ ಏರಿಸಬೇಕು ಜೊತೆಗೆ ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ. 3 ರಿಂದ ಶೇ 7ಕ್ಕೆ ಏರಿಸಬೇಕು ಎಂದಿತು.

ಈ ಮೀಸಲಾತಿಯ ಕುರಿತು ಬಂದ ವರದಿಗಳ ಬಗ್ಗೆ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಸಿದ್ದರಾಮಯ್ಯನವರೂ ಹಾಗೂ ನಂತರ ಶ್ರೀ ಕುಮಾರ ಸ್ವಾಮಿಯವರು ಸೂಕ್ತವಾದ ನಿರ್ಧಾರವನ್ನು ತೆಗೆದುಕೊಳ್ಳದೆ ಹಿಂದುಳಿದ ಸಮಾಜಕ್ಕೆ ಸಿಗಲೇ ಬೇಕಿದ್ದ ಸಾಮಾಜಿಕ ನ್ಯಾಯದಿಂದ ವಂಚಿತರನ್ನಾಗಿ ಮಾಡಿದ್ದರು. ಇದನ್ನು ಬಗೆಹರಿಸುವ ನಿಟ್ಟಿನಲ್ಲಿ ಬಿಜೆಪಿ ಸರಕಾರವು ರಾಜ್ಯ ಕಾನೂನೂ ಸಚಿವರ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿಯೊಂದನ್ನು ರಚಿಸಿ ಅಲ್ಲಿ ಎಲ್ಲಾ ಆಯೋಗಗಳ ವರದಿ, ಹಾಗೂ ಸಮಾಜ ವಿವಿಧ ವರ್ಗಗಳ ಅಭಿಪ್ರಾಯ, ಎಲ್ಲವನ್ನೂ ಪರಿಗಣಿಸಿ ಯಾರ ಭಾವನೆಗಳಿಗೂ ಧಕ್ಕೆ ಆಗದ ರೀತಿಯಲ್ಲಿ ಮುಖ್ಯಮಂತ್ರಿ ಶ್ರೀ ಬೊಮ್ಮಾಯಿ ಅವರ ನೇತೃತ್ವದ ಬಿಜೆಪಿ ಸರಕಾರ ಈ ಹೊಸ ಮೀಸಲಾತಿಯನ್ನು ಘೋಷಣೆ ಮಾಡಿದೆ.

ಈ ನಿರ್ಧಾರವನ್ನು, ಅದರಲ್ಲೂ ರಾಜ್ಯ ಸರಕಾರ ಕೊಟ್ಟ ಒಳ ಮೀಸಲಾತಿಯ ಬಗ್ಗೆ ಸುದಾಯದ ಹಿರಿಯರು ಮಠಾಧೀಶರುಗಳು, ಪ್ರಮುಖ ಮುಖಂಡರು ಒಪ್ಪಿಗೆ ಹಾಗೂ ಸಂತಸ ವ್ಯಕ್ತಪಡಿಸಿ ಸರಕಾರವನ್ನು ಅಭಿನಂದಿಸಿದರೆ, ವಿರೋಧ ಪಕ್ಷದ ನಾಯಕರುಗಳಾದ ಶ್ರೀ ಸಿದ್ದರಾಮಯ್ಯ, ಶ್ರೀ ಕುಮಾರಸ್ವಾಮಿ ಅವರು, ಶ್ರೀ ಡಿ.ಕೆ. ಶಿವಕುಮಾರ್ ಅವರು ತುಷ್ಟೀಕರಣದ ರಾಜನೀತಿಯ ಬೆನ್ನು ಹತ್ತಿ ರಾಜ್ಯದ ಬಹುದೊಡ್ಡ ಸಮಾಜದ ಹಿತವನ್ನು ಬಲಿಕೊಟ್ಟು ಸರಕಾರದ ಈ ಮೀಸಲಾತಿಯನ್ನು ವಿರೋಧಿಸುತ್ತಿದ್ದಾರೆ. ಜೊತೆಗೆ ಮುಂದೆ ತಮ್ಮ ಸರಕಾರ ಬಂದರೆ ಈ ಮೀಸಲಾತಿಯನ್ನು ರದ್ದು ಮಾಡುತ್ತೇವೆ ಎಂದು ಪತ್ರಿಕಾ ಹೇಳಿಕೆಗಳನ್ನು ಕೊಡುತ್ತಿರುವುದು ಉತ್ತಮವಾದ ಪ್ರಜಾಪ್ರಭುತ್ವ ವ್ಯವಸ್ಥೆಗೆ ನಿಜಕ್ಕೂ ಪೂರಕವಲ್ಲ.



# ಮೋರ್ಚಾಗಳ ಸಮಾವೇಶ




ರತನ್ ರಮೇಶ್ ಪೂಜಾರಿ
ರಾಜ್ಯ ಮಾಧ್ಯಮ ಸಮಿತಿ ಸದಸ್ಯರು,
ಬಿಜೆಪಿ ಕರ್ನಾಟಕ


ಭಾರತ ದೇಶದಾದ್ಯಂತ ಸಕ್ರಿಯ ಮತ್ತು ವಿಸ್ತಾರ ಉಪಸ್ಥಿತಿಯೊಂದಿಗೆ ಅತಿ ದೊಡ್ಡ ರಾಜಕೀಯ ಪಕ್ಷವೆಂದರೆ ಅದು ಭಾರತೀಯ ಜನತಾ ಪಕ್ಷ. ದೇಶ ಮೊದಲು ಎಂಬ ಘನ ಸಿದ್ಧಾಂತದೊಂದಿಗೆ ಅದೆಷ್ಟೋ ಕೋಟಿ ಕಾರ್ಯಕರ್ತರು ಈ ಪಕ್ಷದಲ್ಲಿ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದ್ದಾರೆ, ಸಲ್ಲಿಸುತ್ತಿದ್ದಾರೆ, ಸಲ್ಲಿಸಲಿದ್ದಾರೆ. ಇಂತಹ ಭಾರತೀಯ ಜನತಾ ಪಕ್ಷದ ರಚನೆ ಬಗ್ಗೆ ಒಮ್ಮೆ ಕಣ್ಣು ಹಾಯಿಸಿದರೆ ಪಕ್ಷದ ಮಾತ್ರ ಘಟಕದ ಜೊತೆಗೆ ಏಳು ಮೋರ್ಚಾಗಳು ಕಾಣಸಿಗುತ್ತವೆ.

ಈ ಮೋರ್ಚಾಗಳು ಸಮಾಜದ ವಿವಿಧ ವರ್ಗಗಳ ಜನರನ್ನು ಪಕ್ಷದ ಮುಖ್ಯ ವಾಹಿನಿಗೆ ಜೋಡಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತವೆ. ಯುವ ಮೋರ್ಚಾ, ಮಹಿಳಾ ಮೋರ್ಚಾ, ಎಸ್ಸಿ ಮೋರ್ಚಾ, ಎಸ್ ಟಿ ಮೋರ್ಚಾ, ಓಬಿಸಿ ಮೋರ್ಚಾ, ರೈತ ಮೋರ್ಚಾ ಇವು ಆ ಏಳು ಮೋರ್ಚಾಗಳು. ಉಳಿದ ಸಮಯಗಳಲ್ಲಿ ಈ ಮೋರ್ಚಾಗಳು ವಿವಿಧ ರೀತಿಯ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡರೆ, ಒಂದು ರಾಜಕೀಯ ಪಕ್ಷದ ಭಾಗವಾಗಿ ಚುನಾವಣೆಗಳಲ್ಲಿ ಈ ಮೋರ್ಚಾಗಳು ತಮಗೆ ಸಂಬಂಧಪಟ್ಟಂತಹ ಸಮುದಾಯಗಳ ಜನರನ್ನು ಸಂಘಟಿಸಿ ಪಕ್ಷದ ಜೊತೆ ನಿಲ್ಲುವಂತೆ ಮಾಡುವ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತವೆ. ಮುಂಬರುವ ಕರ್ನಾಟಕ ರಾಜ್ಯದ ವಿಧಾನಸಭಾ ಚುನಾವಣೆಯ ದೃಷ್ಟಿಯಿಂದ ಭಾರತೀಯ ಜನತಾ ಪಕ್ಷ ಕರ್ನಾಟಕ ವತಿಯಿಂದ ವಿವಿಧ ಮೋರ್ಚಾಗಳ ಜಿಲ್ಲಾ ಸಮಾವೇಶವನ್ನು ರಾಜ್ಯದಾದ್ಯಂತ ಮಾಡಲಾಯಿತು.

ಈ ಜಿಲ್ಲಾ ಮೋರ್ಚಾ ಸಮಾವೇಶಗಳ ಉದ್ದೇಶ ಆಯಾ ಸಮುದಾಯಗಳಲ್ಲಿ ನಮ್ಮ ಪಕ್ಷದ ವಿಚಾರಗಳನ್ನು ಸಮರ್ಪಕವಾಗಿ ತಿಳಿಸುವುದು ಹಾಗೂ ಆಯಾ ವರ್ಗಕ್ಕೆ ನೀಡಿರುವಂತಹ ಯೋಜನೆಗಳನ್ನು ಮನದಟ್ಟು ಮಾಡುವಂತಹದ್ದು. ಈ ಎರಡು ವಿಚಾರಗಳನ್ನು ಇಟ್ಟುಕೊಂಡು ಸಮುದಾಯವನ್ನು ಭೇಟಿ ಮಾಡಿ ಸಮಾವೇಶಕ್ಕೆ ಆಹ್ವಾನವನ್ನು ಮಾಡಲಾಯಿತು. ಆ ಸಮುದಾಯದ ಮುಖಂಡರನ್ನು, ಆ ಸಮಾಜದ ಗುರಿಕಾರರನ್ನು ಈ ಸಭೆಗೆ ಅಧಿಕೃತವಾಗಿ ಪತ್ರವನ್ನು ನೀಡಿ ಆಮಂತ್ರಣ ಮಾಡಿ ಬಹಳ ಯಶಸ್ವಿಗೊಳಿಸಲಾಗಿದೆ.

ಬೇರೆ ಬೇರೆ ಕ್ಷೇತ್ರದಲ್ಲಿ ಸಾಧನೆ ಮಾಡಿರುವಂತಹ ಉದಾಹರಣೆಗೆ ಕ್ರೀಡೆ ಇರಬಹುದು, ಕಾಲೇಜುಗಳಲ್ಲಿ ಎನ್ ಸಿಸಿ, ಎನ್‌ಎಸ್‌ಎಸ್ ಈ ರೀತಿಯಾಗಿ ವಿವಿಧ ಕ್ಷೇತ್ರಗಳಲ್ಲಿ ರಾಜ್ಯ, ರಾಷ್ಟ್ರೀಯ ಮತ್ತು ಜಿಲ್ಲಾ ಮಟ್ಟದಲ್ಲಿ ಗುರುತಿಸಿಕೊಂಡಿರುವ ಯುವಕ ಯುವತಿಯರನ್ನು ಈ ಸಮಾವೇಶದ ವೇದಿಕೆ ಮೇಲೆ ಸನ್ಮಾನ ಸತ್ಕಾರ ಮಾಡಿ, ಅವರ ಪ್ರೇರಣೆ ಇನ್ನುಳಿದ ಯುವಕರಿಗೆ ಸಿಗಬೇಕು ಎಂಬ ಸದುದ್ದೇಶವನ್ನು ಇಟ್ಟುಕೊಂಡು ಸಾವಿರಾರು ಯುವಕ ಯುವತಿಯರಿಗೆ ಸನ್ಮಾನವನ್ನು

ಮಾಡಲಾಗಿದೆ. ಪರಿಶಿಷ್ಟ ಪಂಗಡದ ಲಂಬಾಣಿ ವೇಷ ಭೂಷಣಗಳು ಹಾಗೂ ಆಯಾ ಸಮುದಾಯಗಳ ವಿಶಿಷ್ಟ ಉಡುಗೆ ತೊಡುಗೆಗಳನ್ನು ಧರಿಸಿ ಆಯಾ ಸಮುದಾಯಗಳ ಸಮಾವೇಶದಲ್ಲಿ ಜನರು ಭಾಗವಹಿಸಿರುವಂಥದ್ದು ವಿಶೇಷವಾಗಿತ್ತು.

ನಮ್ಮ ಪಕ್ಷದ ತತ್ವ ಸಿದ್ಧಾಂತ ಹಾಗೂ ನಮ್ಮ ಸರ್ಕಾರಗಳು ಮಾಡಿರುವಂತ ಅಭಿವೃದ್ಧಿ ಹಾಗೂ ಕಲ್ಯಾಣ ಕಾರ್ಯಕ್ರಮಗಳನ್ನು ಜನರಿಗೆ ಮನದಟ್ಟು ಮಾಡಿ ಮುಂಬರುವ ಚುನಾವಣೆಯಲ್ಲಿ ನಾವು ಸ್ಪಷ್ಟ ಬಹುಮತವನ್ನು ಪಡೆಯುವ ನಿಟ್ಟಿನಲ್ಲಿ ಅವರ ಬೆಂಬಲವನ್ನ ಪಡೆಯುವ ಉದ್ದೇಶವನ್ನು ಇಟ್ಟುಕೊಂಡು ಈ ಸಮಾವೇಶಗಳನ್ನು ನಾವು ಯಶಸ್ವಿಯಾಗಿಸಿದ್ದೇವೆ. ಸುಮಾರು 10 ಲಕ್ಷ ವಿವಿಧ ಸಮುದಾಯಗಳ ಜನರನ್ನು ನಾವು ತಲುಪುವಂತ ಕೆಲಸವನ್ನು ಮಾಡಿದ್ದೇವೆ. ನಮ್ಮ ವಿಚಾರಗಳನ್ನು ತಿಳಿಸಿದ್ದೇವೆ. ನಮ್ಮ ಪಕ್ಷಕ್ಕೆ ಅವರನ್ನು ಕರೆದುಕೊಂಡು ಬರುವಂತಹ ಕೆಲಸವನ್ನು ಮಾಡಿದ್ದೇವೆ. ಹೀಗಾಗಿ ರಾಜ್ಯದಲ್ಲಿ ನಡೆದಿರುವಂತ ವಿವಿಧ ಮೋರ್ಚಾಗಳ ಸಮಾವೇಶ ತುಂಬಾ ಅದ್ದೂರಿಯಾಗಿ ಅರ್ಥಪೂರ್ಣವಾಗಿ ಯಶಸ್ವಿಯಾಗಿವೆ ಎನ್ನಲು ಬಹಳ ಖುಷಿಯಾಗುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಒಟ್ಟು 7 ಮೋರ್ಚಾಗಳನ್ನೊಳಗೊಂಡಂತೆ ಇಂದಿನವರೆಗೆ 140ಕ್ಕೂ ಹೆಚ್ಚು ರಾಜ್ಯ ಹಾಗೂ ಜಿಲ್ಲಾ ಸಮಾವೇಶಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ. ಈ ಸಮಾವೇಶಗಳಲ್ಲಿ ಮುಖ್ಯ ಭಾಷಣಕಾರರಾಗಿ ರಾಷ್ಟ್ರೀಯ ಅಧ್ಯಕ್ಷರು, ರಾಜ್ಯ ಅಧ್ಯಕ್ಷರು, ಕೇಂದ್ರದ ಸಚಿವರುಗಳು, ರಾಜ್ಯದ ಸಚಿವರುಗಳು ಹಾಗೂ ಹತ್ತಾರು ನಾಯಕರಗಳು ಭಾಗವಹಿಸಿ ನಮಗೆ ಪ್ರೇರಣೆ ಕೊಡುವಂತ ಕೆಲಸವನ್ನು ಮಾಡಿದ್ದಾರೆ.

ಒಟ್ಟಾರೆಯಾಗಿ ಹೀಗೆ ನಡೆದಂತ ಮೋರ್ಚಾಗಳ ಸಮಾವೇಶವು ಭಾರತೀಯ ಜನತಾ ಪಕ್ಷಕ್ಕೆ ಒಂದು ಅನುಕೂಲಕರ ವಾತಾವರಣವನ್ನು ಸೃಷ್ಟಿಸುವ ಕೆಲಸವನ್ನು ಮಾಡಿದೆ. ಯುವ ಮೋರ್ಚಾದ ಬೈಕ್ ರ್ಯಾಲಿ ಇರಬಹುದು, ಎಲ್ಲಾ ಸಮಾವೇಶಗಳಲ್ಲಿನ ನಗರ ಅಲಂಕಾರವಿರಬಹುದು ಇವುಗಳು ಚುನಾವಣೆಯ ವಾತಾವರಣವನ್ನು ತರಲು ನೆರವಾಗಿವೆ. ಸುಮಾರು ಐದು ಸಾವಿರಕ್ಕೂ ಹೆಚ್ಚು ಪ್ರತಿಭಾವಂತರಿಗೆ ವೇದಿಕೆ ಮೇಲೆ ಪುರಸ್ಕಾರ ನೀಡುವಂಥ ಕೆಲಸ ಮಾಡಲಾಗಿದೆ. ನಮ್ಮ ಮುಖ್ಯ ವೇದಿಕೆಗಳಲ್ಲಿ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಭಾಷಣ ಸ್ಪರ್ಧೆಗಳಲ್ಲಿ ಭಾಗವಹಿಸಿರುವಂತಹ ಯುವ ಭಾಷಣಕಾರರಿಗೆ ನರೇಂದ್ರ ಮೋದಿಯವರ ಸರ್ಕಾರ ಹಾಗೂ ಬೊಮ್ಮಾಯಿಯವರ ಸರ್ಕಾರದ ಸಾಧನೆಗಳ ಬಗ್ಗೆ ಯುವ ಮೋರ್ಚಾ ವೇದಿಕೆಗಳಲ್ಲಿ ಅವರ ಕಡೆಯಿಂದ ಭಾಷಣ ಮಾಡುವಂತಹ ಅವಕಾಶವನ್ನು ನೀಡಿದ್ದೇವೆ.

ಒಟ್ಟಿನಲ್ಲಿ ಭಾರತೀಯ ಜನತಾ ಪಕ್ಷದ ತತ್ವ ಸಿದ್ಧಾಂತಗಳನ್ನು ಹಾಗೂ ಬಿಜೆಪಿ ಸರ್ಕಾರಗಳ ಅಭಿವೃದ್ಧಿ ಹಾಗೂ ಕಲ್ಯಾಣ ಕಾರ್ಯಕ್ರಮಗಳನ್ನು ಜನರಿಗೆ ಮನದಟ್ಟು ಮಾಡಿ ಸಮಾಜದಲ್ಲಿ ಬಿಜೆಪಿಯ ಪರವಾದ ಒಂದು ಉತ್ತಮ ಅಲೆಯನ್ನ, ವಾತಾವರಣವನ್ನು ಸೃಷ್ಟಿಸುವ ಕೆಲಸವನ್ನು ಈ ಮೋರ್ಚಾಗಳ ಸಮಾವೇಶ ಮಾಡಿದೆ. ಆ ಮೂಲಕ ಇವುಗಳು 2023ರ ಕರ್ನಾಟಕ ರಾಜ್ಯದ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷಕ್ಕೆ ಗೆಲುವಿನ ಮೆಟ್ಟಿಲಾಗಿ ಪರಿಣಮಿಸಲಿದೆ ಎಂಬುದು ನಮ್ಮ ದೃಢ ಆಶಯವಾಗಿದೆ.

## ವಿಶೇಷ

ಗದಗದ ಮಹಿಳಾ ಮೋರ್ಚ ಸಮಾವೇಶದಲ್ಲಿ ಕಾರಣಾಂತರದಿಂದ ಅತಿಥಿ ಭಾಷಣಕಾರರು ಕಾರ್ಯಕ್ರಮವನ್ನು ತಲುಪಲಾಗಲಿಲ್ಲ. ಆಗ ಆಯೋಜಕರು ಕಸಿವಿಸಿಕೊಳ್ಳದೆ ವೇದಿಕೆ ಮೇಲೆ ಇರುವ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷರು ಹಾಗೂ ಮಂಡಲಗಳ ಅಧ್ಯಕ್ಷರುಗಳಿಗೆ ಭಾಷಣ ಮಾಡುವಂತಹ ಅವಕಾಶವನ್ನು ನೀಡಿದರು. ಇದು ಎಷ್ಟೊಂದು ಸುಂದರ ಕಾರ್ಯಕ್ರಮವಾಗಿತ್ತೆಂದರೆ ಒಬ್ಬೊಬ್ಬ ಮಹಿಳಾ ಮೋರ್ಚಾದ ಜಿಲ್ಲೆ ಹಾಗೂ ಮಂಡಲ ಅಧ್ಯಕ್ಷರು ಹತ್ತರಿಂದ ಹದಿನೈದು ನಿಮಿಷ ಉತ್ಕೃಷ್ಟವಾಗಿ ಮಾತನಾಡಿದ್ದಾರೆ. ನೆರೆದಿದ್ದ ಮೂರು ಸಾವಿರ ಜನ ಮಹಿಳೆಯರು ಎರಡು ಗಂಟೆಗಳ ತನಕ ಚೂರೂ ಅಲ್ಲಾಡಿಲ್ಲ. ಒಬ್ಬರೂ ಎದ್ದೋಗಿಲ್ಲ. ಅದರ ಪರಿಣಾಮ ಏನಾಯ್ತೆಂದರೆ ಆ ಮಂಡಲಗಳಲ್ಲಿ ನಮ್ಮಲ್ಲೆ ಎಷ್ಟೊಂದು ಸುಂದರವಾಗಿ ಹಾಗೂ ಪರಿಣಾಮಕಾರಿಯಾಗಿ ಭಾಷಣ ಮಾಡುವಂತಹ ಪ್ರತಿಭೆಗಳಿದ್ದಾರೆ ಎನ್ನುವುದು ಅನಾವರಣಗೊಂಡಿತು. ಹಾಗೂ ಇಷ್ಟೊಂದು ದೊಡ್ಡ ಸಭೆಯನ್ನು ಕೂಡ ನಿರರ್ಗಳವಾಗಿ ಮಾತನಾಡುವಂತವರು ನಮ್ಮಲ್ಲಿ ಇದ್ದಾರೆ ಎನ್ನುವಂತಹ ವಿಶೇಷ ಅಲ್ಲಿ ನಾಯಕರುಗಳಿಗೂ ಕೂಡ ಮನವರಿಕೆಯಾಯಿತು. ಹಾಗೂ ಮಂಡಲದ ಅಧ್ಯಕ್ಷರುಗಳಿಗೆ ನಾವು ಕೂಡ ಇಷ್ಟು ದೊಡ್ಡ ಸಭೆಯಲ್ಲಿ ಮಾತನಾಡಬಲ್ಲೆವು ಎನ್ನುವಂತ ಆತ್ಮವಿಶ್ವಾಸದ ಅನಾವರಣಗೊಂಡಿತು. ಮರುದಿನದ ಎಲ್ಲಾ ದಿನಪತ್ರಿಕೆಗಳಲ್ಲಿ ಇದನ್ನೇ ಅತಿ ಹೆಚ್ಚು ಹೈಲೈಟ್ ಮಾಡಿ ಬರೆದ ಸುದ್ದಿಗಳು ಪ್ರಕಟವಾದವು. ನಾಯಕರುಗಳ ಅನುಪಸ್ಥಿತಿಯಲ್ಲೂ ಜಿಲ್ಲಾ ಹಾಗೂ ಮಂಡಲದ ಮಹಿಳಾ ಮೋರ್ಚಾ ಅಧ್ಯಕ್ಷರುಗಳು ಕಾರ್ಯಕ್ರಮವನ್ನು ಬಹಳ ಯಶಸ್ವಿಗೊಳಿಸಿದರು ಎಂಬ ಪ್ರಶಂಸನೀಯ ವರದಿಗಳು ಬಹಳ ಧನಾತ್ಮಕವಾಗಿ ಪತ್ರಿಕೆಗಳಲ್ಲಿ ಪ್ರಕಟವಾದದ್ದು ಬಹಳ ವಿಶೇಷವಾಗಿತ್ತು.



# ಬಿಜೆಪಿಯೇ ಭರವಸೆ

## ವಿಧಾನಸಭಾ ಚುನಾವಣೆ-2023

2023 ರ ವಿಧಾನಸಭಾ ಚುನಾವಣೆ ರಾಜ್ಯದ ಹಿತದೃಷ್ಟಿಯಿಂದ ಅತ್ಯಂತ ಮಹತ್ವವಾದುದು. ಡಬಲ್ ಇಂಜಿನ್ ಸರಕಾರಗಳ ಜನಪರವಾದ ಆಡಳಿತದ ಮುಂದುವರಿಕೆಗೆ ಪ್ರಸಕ್ತ ಚುನಾವಣೆಯಲ್ಲಿ ರಾಜ್ಯದ ಜನತೆ ಪೂರ್ಣ ಪ್ರಮಾಣದ ಬಹುಮತದ ಬಿಜೆಪಿ ಸರಕಾರವನ್ನು ಆಯ್ಕೆ ಮಾಡಬೇಕಾದ ಅವಶ್ಯಕತೆಯಿದೆ. ಸರಕಾರಗಳ ಯೋಜನೆಗಳ ಪ್ರಚಾರದೊಂದಿಗೆ ಪ್ರತೀ ಮನೆಗೂ, ಪ್ರತೀ ಮನಕ್ಕೂ ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಸರಕಾರದ ಅನಿವಾರ್ಯತೆ ಬಗ್ಗೆ ಜಾಗೃತಗೊಳಿಸಬೇಕಾದ ಜವಾಬ್ದಾರಿ ನಮ್ಮದಾಗಿದೆ.

ಕೋವಿಡ್‌ನಂತಹ ಸಂಕಷ್ಟದ ಸಮಯದಲ್ಲಿ ಹಾಗೂ ಪ್ರಾಕೃತಿಕ ವಿಕೋಪಗಳು ರಾಜ್ಯವನ್ನು ಕಾಡಿದ ಸಂದರ್ಭದಲ್ಲಿ ಕೇಂದ್ರದ ಸಹಭಾಗಿತ್ವದೊಂದಿಗೆ ಅತ್ಯಂತ ಸಮರ್ಪಕವಾಗಿ ಮತ್ತು ಸಂವೇದನಾಶೀಲವಾಗಿ ತನ್ನ ಜವಾಬ್ದಾರಿಯನ್ನು ಶ್ರೀ ಯಡಿಯೂರಪ್ಪನವರ ನೇತೃತ್ವದ ಬಿಜೆಪಿ ಸರಕಾರ ನಿರ್ವಹಿಸಿತು. ಹಾಗೆಯೇ ನಂತರ ಬಂದ ಶ್ರೀ ಬಸವರಾಜ ಬೊಮ್ಮಾಯಿಯವರ ನೇತೃತ್ವದ ಸರಕಾರ ಅಽ ಕಾರಕ್ಕೆ ಬಂದ ದಿನವೇ ಸಾಮಾಜಿಕ ಕಳಕಳಿಯಿಂದ ಅಮೃತ ಯೋಜನೆಗಳನ್ನು ಪ್ರಕಟಿಸಿ ಜಾರಿಗೆ ತಂದಿತು.

ಇವೆಲ್ಲಕ್ಕಿಂತ ಮಿಗಿಲಾಗಿ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಪರಿಶಿಷ್ಟ ಜಾತಿ, ಪಂಗಡಗಳ ಮೀಸಲಾತಿಯನ್ನು ಹೆಚ್ಚಿಸುವುದರ ಜೊತೆಗೆ ಈ ಸಮುದಾಯಗಳಿಗೆ ಅವರ ಜನಸಂಖ್ಯೆಗನುಗುಣವಾಗಿ ಒಳ ಮೀಸಲಾತಿಯನ್ನು ನೀಡುವ ದಿಟ್ಟ ಹಾಗೂ ಐತಿಹಾಸಿಕ ನಿರ್ಧಾರವನ್ನು ತೆಗೆದುಕೊಂಡಿದೆ. ಇದಲ್ಲದೆ ಸಮಾಜದ ಎಲ್ಲಾ ವರ್ಗಗಳಿಗೆ ಮೀಸಲಾತಿಯ ಸವಲತ್ತು ಸಮರ್ಪಕವಾಗಿ ಸಿಗುವ ಉದ್ದೇಶದಿಂದ ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಪರಿಷ್ಕರಿಸುವ ಮಹತ್ತರ ನಿರ್ಧಾರವನ್ನು ತೆಗೆದುಕೊಂಡಿದೆ.

ಅಂತ್ಯೋದಯದ ಅನುಷ್ಠಾನ, ರೈತರ ಮಕ್ಕಳಿಗೆ ವಿದ್ಯಾನಿಽ , ಗ್ರಾಮಪಂಚಾಯಿತಿ ಜನಪ್ರತಿನಿಽ ಗಳ ಗೌರವ ಧನದ ಹೆಚ್ಚಳ, ನೇಕಾರರ ಕಲ್ಯಾಣಕ್ಕಾಗಿ ರೂಪಿಸಿದ ಯೋಜನೆಗಳು, ವಿಶಿಷ್ಟವಾಗಿ ಆಚರಿಸಿದ ಕನ್ನಡ ರಾಜ್ಯೋತ್ಸವ, ದೇಶದಲ್ಲೇ ಮೊದಲ ಬಾರಿಗೆ ಜಾರಿಗೆ ತಂದ ನೂತನ ಶಿಕ್ಷಣ ನೀತಿ, ಕೋಟ್ಯಾಂತರ

ಕನ್ನಡಿಗರ ಭಾವನೆಯ ಪ್ರತೀಕವಾದ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಲೋಕಾರ್ಪಣೆ, ಕಾಶಿ ಯಾತ್ರಿಕರಿಗೆ ಸಹಾಯಧನ, ಅಂಜನಾದ್ರಿ ಬೆಟ್ಟದ ಅಭಿವೃದ್ಧಿಗೆ ಯೋಜನೆ, ಮಹಿಳಾ ಸಬಲೀಕರಣಕ್ಕೆ ಅತಿಹೆಚ್ಚು ಅನುದಾನ, ನೀರಾವರಿ ಯೋಜನೆಗಳಿಗೆ ಹಿಂದೆಂದಿಗಿಂತಲೂ ಹೆಚ್ಚಿನ ಅನುದಾನದಂತಹ ಮಹತ್ವದ ನಿರ್ಧಾರಗಳು ಪಸಕ್ತ ರಾಜ್ಯ ಸರಕಾರದಿಂದ ಘೋಷಣೆಯಾಗಿ ಜಾರಿಯಾಗುತ್ತಿವೆ.

ಇನ್ನು ಕೇಂದ್ರದ ಶ್ರೀ ನರೇಂದ್ರಮೋದಿಯವರ ನೇತೃತ್ವದ ಕೇಂದ್ರ ಸರಕಾರ ಹಿಂದೆಂದಿಗಿಂತಲೂ ಹೆಚ್ಚಿನ ಅನುದಾನವನ್ನು ರಾಜ್ಯಕ್ಕೆ ಬಿಡುಗಡೆ ಮಾಡಿದೆ. ರಾಜ್ಯದಲ್ಲಿ ಕಳೆದ 8 ವರ್ಷಗಳಿಂದ 1600 ಕಿಮೀ ಉದ್ದದ ರೈಲ್ವೇ ಹಳಿಗಳ ವಿದ್ಯುದೀಕರಣ ಕಾರ್ಯ ಕೈಗೊಳ್ಳಲಾಗಿದೆ. ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣದ ವೇಗ ಶೇಕಡಾ 24 ರಷ್ಟು ಹೆಚ್ಚಳವಾಗಿದೆ, ಆತ್ಮನಿರ್ಭರ ಭಾರತಕ್ಕೆ ಪೂರಕವಾದ 15000 ಸ್ಟಾರ್ಟ್‌ಅಪ್‌ಗಳು ರಾಜ್ಯದಲ್ಲಿ ಕಾರ್ಯಾರಂಭ ಮಾಡಿದೆ.

ಕಿಸಾನ್ ಸಮ್ಮಾನ್ ಯೋಜನೆಯಡಿ ರಾಜ್ಯದ 50 ಲಕ್ಷಕ್ಕೂ ಹೆಚ್ಚು ರೈತರು ಆರ್ಥಿಕ ಸಹಾಯ ಪಡೆದಿದ್ದಾರೆ. ಪ್ರಧಾನಮಂತ್ರಿ ಇಂದಿರಾ ಆವಾಜ್ ಯೋಜನೆಯಡಿ 2,94,209 ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಂಡು ಫಲಾನುಭವಿಗಳಿಗೆ ಹಸ್ತಾಂತರವಾಗಿದೆ. ಜಲಜೀವನ್ ಮಿಷನ್ ಯೋಜನೆಯಡಿ ಬಹುತೇಕ ಗ್ರಾಮಗಳು ನಲ್ಲಿ ನೀರಿನ ಸೌಲಭ್ಯವನ್ನು ಪಡೆದಿವೆ.

ಹೀಗೆ ಡಬಲ್ ಇಂಜಿನ ಸರಕಾರದ ಸಾಧನೆಗಳು ನಮ್ಮ ಬೆನ್ನಿಗಿದೆ. ರಾಜಕಾರಣದಲ್ಲಿ ವಿಭಿನ್ನವಾದ ವಿಚಾರಧಾರೆಯೂ ನಮ್ಮ ಜೊತೆಗಿದೆ. ಕೇಂದ್ರದ ಶ್ರೀ ನರೇಂದ್ರ ಮೋದಿಯವರ, ಶ್ರೀ ನಡ್ಡಾರವರ ಮತ್ತು ಶ್ರೀ ಅಮಿತ್‌ಶಾರವರ ಕೇಂದ್ರದ ನಾಯಕತ್ವದ ಸಹಕಾರವಿದೆ. ಶ್ರೀ ನಳೀನ್‌ಕುಮಾರ್ ಕಟೀಲರ ಸಾರಥ್ಯದ ಸಂಘಟನೆ ಹಾಗೂ ಶ್ರೀ ಬಿ.ಎಸ್. ಯಡಿಯೂರಪ್ಪ ಮತ್ತು ಶ್ರೀ ಬಸವರಾಜ ಬೊಮ್ಮಾಯಿಯವರ ನೇತೃತ್ವವಿದೆ.

ಕಾಂಗ್ರೆಸ್ ಆಡಳಿತ ಕಾಲದ ಭ್ರಷ್ಟಾಚಾರ, ಹಿಂದೂ ವಿರೋಧಿ ನಿಲುವುಗಳು, ತುಷ್ಟೀಕರಣದ ನೀತಿಗಳು, ಸಮಾಜವನ್ನು ಒಡೆದು ಆಳುವ ಕುತಂತ್ರಗಳು ನಮಗೆ ಸಹಕಾರಿಯಾಗಲಿದೆ. ನಮ್ಮೆಲ್ಲಾ ಕ್ರಿಯಾಶೀಲತೆಗೆ ವೇಗ ಕೊಡೋಣ. ಅನುಸರಿಸಬೇಕಾದ ತಂತ್ರಗಾರಿಕೆ, ಕಾರ್ಯವೈಖರಿ, ನಮಗಿರುವ ಸಕಾರಾತ್ಮಕ ಅಂಶಗಳು, ನಮಗೆದುರಾಗುವ ಸವಾಲಗಳೆಲ್ಲವನ್ನೂ ಈ ಕಿರುಹೊತ್ತಿಗೆಯಲ್ಲಿ ನೀಡಲಾಗಿದೆ. ಬಿಜೆಪಿಯೇ ಭರವಸೆ ಎಂಬುದನ್ನು ರಾಜ್ಯದ ಜನತೆಯ ಮನದಲ್ಲಿ ಮೂಡಿಸೋಣ, ಬಿಜೆಪಿ ಗೆಲ್ಲಿಸೋಣ.



## ನಮಗಿರುವ ಸಕಾರಾತ್ಮಕ ಅಂಶಗಳು

**ಸಮರ್ಥ ನಾಯಕತ್ವ ನಮಗಿರುವ ವರದಾನ. ವಿಶ್ವಮಾನ್ಯತೆ ಪಡೆದ ಶ್ರೇಷ್ಟ ನಾಯಕರಾದ ಪ್ರಧಾನಿ ಶ್ರೀ ನರೇಂದ್ರಮೋದಿಯವರ ನಾಯಕತ್ವ, ಶ್ರೀ ಅಮಿತ್‌ಶಾರವರ ಚಾಣಕ್ಯ ತಂತ್ರಗಳು. ಶ್ರೀ ನಡ್ಡಾರವರ ಸೂಕ್ತಮಾರ್ಗದರ್ಶನ.**

**ರಾಜ್ಯದ ಶ್ರೀ ಬಸವರಾಜ ಬೊಮ್ಮಾಯಿ ಮತ್ತು ಶ್ರೀ ಯಡಿಯೂರಪ್ಪನವರ ನಾಯಕತ್ವ, ಶ್ರೀ ನಳೀನ್‌ಕುಮಾರ್ ಕಟೀಲರ ಸಾರಥ್ಯದ ಸಂಘಟನೆಯ ಬಲ.**

**ಇಡೀ ರಾಜ್ಯದಲ್ಲಿ ಕೆಳಹಂತದವರೆಗೂ ಬೆಳೆದಿರುವ ಬದ್ಧತೆಯುಳ್ಳ ಕಾರ್ಯಕರ್ತರ ಪಡೆ.**

**ಇದರ ಜೊತೆಗೆ ಕಾಂಗ್ರೆಸ್‌ನ ತುಷ್ಟೀಕರಣದ ನಡೆ ನುಡಿಗಳು, ಹಿಂದೂ ವಿರೋಧಿ ನಿಲುವುಗಳು, ನಾಡಿನ ಸಂಸ್ಕೃತಿ, ಅಸ್ಮಿತೆಗೆ ಕಳಂಕ ತರುವಂತಹ ನಿರ್ಧಾರಗಳು**



# ಬಿಜೆಪಿ ಸರಕಾರದಿಂದ ಐತಿಹಾಸಿಕ ನಿರ್ಧಾರ

ಬಹು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ದಲಿತ ಜನಾಂಗದ ಒಳ ಮೀಸಲಾತಿಯನ್ನೂ ಹಾಗೂ ಹಿಂದುಳಿದ ವರ್ಗಗಳ ಮೀಸಲಾತಿಯ ಪ್ರಮಾಣವನ್ನು.ಪರಿಷ್ಕರಿಸಿ ಆದೇಶ ಮಾಡಿದ ಶ್ರೀ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರಕಾರ

- 6% ಎಸ್ಸಿ ಎಡಗೈ ಜನಾಂಗ
- 5.5% ಎಸ್ಸಿ ಬಲಗೈ ಜನಾಂಗ
- 4.5% ಬಂಜಾರ, ಭೋವಿ, ಕೊರಚ, ಕೊರಮ ಜನಾಂಗ
- 1% ಅಲೆ ಮಾರಿ ಸಣ್ಣ ಜನಾಂಗ
- 4% ಹಿಂದುಳಿದ ವರ್ಗ ಪ್ರವರ್ಗ - 1
- 15% ಹಿಂದುಳಿದ ವರ್ಗ ಪ್ರವರ್ಗ - 2
- 6% ಹಿಂದುಳಿದ ವರ್ಗ ಪ್ರವರ್ಗ-2ಸಿ (ಒಕ್ಕಲಿಗ, ರೆಡ್ಡಿ, ಬಲಿಜ ಸೇರಿ 12 ಜಾತಿ)
- 7% ಹಿಂದುಳಿದ ವರ್ಗ ಪ್ರವರ್ಗ 2ಡಿ (ಪಂಚಮಸಾಲಿ, ವೀರಶೈವ ಲಿಂಗಾಯಿತ ಮತ್ತು ಇತರರು)

## ಉಲ್ಲೇಖಿಸಲೇಬೇಕಾದ ಅಂಶ

ನಮ್ಮ ಬಿಜೆಪಿ ಸರಕಾರ ಡಾ. ಬಿ.ಆರ್.ಅಂಬೇಡ್ಕರ್‌ರವರ ಆಶಯಗಳಿಗೆ ವಿರುದ್ಧವಾಗಿ ಹಿಂದಿನ ಸರಕಾರ ಕೈಗೊಂಡಿದ್ದ ಧರ್ಮಾಧಾರಿತ ಮೀಸಲಾತಿಯನ್ನು ರದ್ದುಗೊಳಿಸಿದೆ. ಇದಕ್ಕೆ ಪ್ರತಿಯಾಗಿ ಪಂಗಡಗಳಾಧಾರಿತ ಒಳ ಮೀಸಲಾತಿಯನ್ನುಘೋಷಿಸಿದೆ. ನಮ್ಮ ಸರಕಾರ ಇಂತಹ ಮಹತ್ತರವಾದ ಜನಪರ ನಿರ್ಧಾರವನ್ನು ತೆಗೆದುಕೊಂಡ ಮೇಲೂ ಕಾಂಗ್ರೆಸ್‌ನವರುತಾವು ಅಽಕಾರಕ್ಕೆ ಬಂದ ಕೂಡಲೇ ಬಿಜೆಪಿ ಸರಕಾರ ಕೈಗೊಂಡಿರುವ ದಲಿತ ಒಳ ಮೀಸಲಾತಿ ನಿರ್ಧಾರವನ್ನೂ ಮತ್ತುಹಿಂದುಳಿದ ವರ್ಗದವರ ಪರಿಷ್ಕೃತ ಮೀಸಲಾತಿ ಆದೇಶವನ್ನೂ ರದ್ದು ಮಾಡಿ ಪುನಃ ತುಷ್ಟೀಕರಣದ ಧರ್ಮಾಧಾರಿತಮೀಸಲಾತಿಯನ್ನು ಜಾರಿಗೆ ತರುವುದಾಗಿ ಹೇಳುತ್ತಿದೆ. ಕಾಂಗ್ರೆಸ್‌ನ ಈ ಜನ ವಿರೋಽ ನಿಲುವನ್ನು ಪ್ರತೀ ಮನೆಗೂ, ಪ್ರತೀಮನಕ್ಕೂ ಮುಟ್ಟಿಸಬೇಕಾಗಿದೆ.

# ಕರ್ನಾಟಕ ಸರಕಾರದ ಪ್ರಮುಖ ಯೋಜನೆಗಳು



## ಅನ್ನದಾತ ಸುಖೀಭವ

- ಮುಖ್ಯಮಂತ್ರಿ ರೈತ ವಿದ್ಯಾನಿಧಿ ಯೋಜನೆ – 11 ಲಕ್ಷ ವಿದ್ಯಾರ್ಥಿಗಳಿಗೆ 484 ಕೋ.ರೂ. ವಿದ್ಯಾರ್ಥಿವೇತನ ವಿತರಣೆ.
- ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ 2021–22ನೇ ಸಾಲಿನಲ್ಲಿ 50.35 ಲಕ್ಷ ರೈತರಿಗೆ ಹಾಗೂ 2022–23ನೇ ಸಾಲಿನಲ್ಲಿ ಇಲ್ಲಿಯವರೆಗೆ 47.83 ಲಕ್ಷ ರೈತರಿಗೆ ನೆರವು.
-



## ಅಂತ್ಯೋದಯದ ಅನುಷ್ಠಾನ

- ಬಹುವರ್ಷಗಳಿಂದ ನೆನಗುದಿಗೆ ಬಿದ್ದಿದ್ದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯೆಗನುಗುಣವಾಗಿ ದಲಿತ ಜನಾಂಗದ ಒಳ ಮೀಸಲಾತಿಯನ್ನೂ ಹಾಗೂ ಹಿಂದುಳಿದ ವರ್ಗಗಳ ಮೀಸಲಾತಿಯ ಪ್ರಮಾಣವನ್ನು. ಪರಿಷ್ಕರಿಸಿ ಆದೇಶ.
- ದಲಿತ ಒಳ ಮೀಸಲಾತಿಯ ಬಗ್ಗೆ ಘೋಷಣೆ, ಎಸ್‌ಸಿ ಎಡಗೈ ಜನಾಂಗಕ್ಕೆ ಶೇ 6, ಎಸ್‌ಸಿ ಬಲಗೈ ಜನಾಂಗಕ್ಕೆ ಶೇ 5.5 , ಬಂಜಾರ, ಬೋವಿ, ಕೊರಚ, ಕೊರಮ ಜನಾಂಗಕ್ಕೆ ಶೇಕಡಾ 4.5, ಅಲೆಮಾರಿ ಸಣ್ಣ ಜನಾಂಗಕ್ಕೆ ಶೇ 1 ಮೀಸಲಾತಿಯ ಘೋಷಣೆ.
- ಹಿಂದುಳಿದ ವರ್ಗಪ್ರವರ್ಗ 1ಕ್ಕೆ ಶೇ 4, ಪ್ರವರ್ಗ 2ಕ್ಕೆ ಶೆ 15, ಪ್ರವರ್ಗ 2ಸಿ (ಒಕ್ಕಲಿಗ, ರೆಡ್ಡಿ, ಬಲಿಜ ಸೇರಿ 12 ಜಾತಿ)ಗೆ ಶೇ 6, ಪ್ರವರ್ಗ 2ಡಿ(ಪಂಚಮಸಾಲಿ, ವೀರಶೈವ ಲಿಂಗಾಯಿತ ಮತ್ತು ಇತರರು)ಗೆ ಶೇ 7 ರಷ್ಟು ಮೀಸಲಾತಿಯ ಘೋಷಣೆ.



## ನೇಕಾರರ ಕಲ್ಯಾಣ

- ನೇಕಾರ ಸಮ್ಮಾನ್ ನೆರವಿನ ಮೊತ್ತ ರೂ.2000/– ದಿಂದ ರೂ. 5,000/–ಕ್ಕೆ ಹೆಚ್ಚಳ.
- 2021–22ನೇ ಸಾಲಿನಲ್ಲಿ 49,544 ನೇಕಾರರಿಗೆ ನೇರ ನಗದು ವರ್ಗಾವಣೆ.
- ಶ್ರಮಿಕ ವರ್ಗದ ಎಲ್ಲಾ ಮಕ್ಕಳಿಗೂ ವಿದ್ಯಾರ್ಥಿವೇತನ ಯೋಜನೆ.



## ಹೂಡಿಕೆ/ಆವಿಷ್ಕಾರ

- ವಿದೇಶಿ ನೇರ ಹೂಡಿಕೆಯಲ್ಲಿ ಕರ್ನಾಟಕಕ್ಕೆ ದೇಶದಲ್ಲೇ ಮೊದಲ ಸ್ಥಾನ.
- 551 ನೂತನ ಯೋಜನೆಗಳಿಗೆ ಅನುಮೋದನೆ. ರೂ. 40,577 ಕೋಟಿ ಹೂಡಿಕೆ. 1.64ಲಕ್ಷ ಜನ ರಿಗೆ ಉದ್ಯೋಗವಕಾಶ.



## ಗ್ರಾಮೋದಯ

- ಗ್ರಾಮಪಂಚಾಯ್ತಿ ಅಧ್ಯಕ್ಷ ರ ಗೌರವಧನ 3 ಸಾವಿರದಿಂದ 6 ಸಾವಿರಕ್ಕೆ ಮತ್ತು ಉಪಾಧ್ಯಕ್ಷರ ಗೌರವಧನ 2 ಸಾವಿರದಿಂದ 4 ಸಾವಿರಕ್ಕೆ, ಗ್ರಾಮ ಪಂಚಾಯ್ತಿ ಸದಸ್ಯರ ಗೌರವಧನ 1 ಸಾವಿರದಿಂದ 2 ಸಾವಿರಕ್ಕೆ ಹೆ ಚ್ಚಳ
- “ಮನೆ ಮನೆಗೆ ಗಂಗೆ” ಜಲಜೀವನ್ ಮಿಷನ್ ಯೋಜನೆಯಡಿ 22.85ಲಕ್ಷ ಮನೆಗಳಿಗೆ ಹೊಸದಾಗಿ ನಲ್ಲಿ ಸಂಪರ್ಕ. ಜಲಜೀವನ್ ಮಿಷನ್ ಯೋಜನೆಯಡಿ ಶೇ. 100 ರಷ್ಟು ಗುರಿ ಸಾಧನೆ.
- ನಾಗರಿಕ ಸೇವೆಗಳನ್ನು ಗ್ರಾಮಸ್ಥರಿಗೆ ಅವರಿರುವ ಸ್ಥಳದಲ್ಲಿಯೇ ಒಂದೇ ಸೂರಿನಡಿ ಒದಗಿಸುವ “ಗ್ರಾಮ ಒನ್” ಯೋಜನೆ ಎಲ್ಲಾ ಜಿಲ್ಲೆಗಳಲ್ಲಿ ಪ್ರಾರಂಭ.



## ಸಾಂಸ್ಕೃತಿಕ ಪುನರುತ್ಥಾನ

- ಬೆಂಗಳೂರು ನಗರ ನಿರ್ಮಾತೃ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆ ಲೋಕಾರ್ಪಣೆ
- ಕರ್ನಾಟಕ ಭಾರತ್ ಗೌರವ್ ಕಾಶಿ ದರ್ಶನ ರೈಲು ಯೋಜನೆ ಜಾರಿ, ರಾಜ್ಯದಿಂದ ಕಾಶಿ ಯಾತ್ರೆಗೆ ತೆರಳುವವರಿಗೆ ತಲಾ 5 ಸಾವಿರ ರೂ.ಸಹಾಯಧನ.
- 140 ಕೋಟಿ ರೂಪಾಯಿ ವೆಚ್ಚದಲ್ಲಿ ಹನುಮನ ಜನ್ಮ ಸ್ಥಳ ಅಂಜನಾದ್ರಿ ಬೆಟ್ಟದ ಅಭಿವೃದ್ಧಿಗೆ ಯೋಜನೆ.
- ಧಾರ್ಮಿಕ ಸ್ವಾತಂತ್ರ್ಯದ ಹಕ್ಕುಗಳ ರಕ್ಷ ಣೆ ಕಾನೂನನ್ನು ಜಾರಿಗೆ ತರುವ ಮೂಲಕ ರಾಜ್ಯದಲ್ಲಿ ಅವ್ಯಾಹತವಾಗಿ ನಡೆಯುತ್ತಿದ್ದ ಮತಾಂತರಕ್ಕೆ ತಡೆ.

## ಕನ್ನಡ ವೈಭವ

- ರಾಜ್ಯಾದ್ಯಂತ ಏಕ ಕಾಲದಲ್ಲಿ ಕೋಟಿ ಕಂಠ ಗಾಯನ ಎಂಬ ಐತಿಹಾಸಿಕ ಕಾರ್ಯಕ್ರಮ. 50 ದೇಶ 27 ರಾಜ್ಯಗಳಲ್ಲಿ 1.35 ಕೋಟಿ ಜನ ಭಾಗಿ.
- ಕನ್ನಡ ರಾಜ್ಯೋತ್ಸ ವ ಪ್ರಶಸ್ತಿ ಗೆ ಆನ್‌ಲೈನ್ ಅಲ್ಲಿ ಶಿಫಾರಸು, ಯಾವುದೇ ಲಾಭಿ ಇಲ್ಲದೆ ಸಾಮಾನ್ಯರನ್ನೂ ಅರಸಿ ಬಂದ ಪ್ರಶಸ್ತಿ.
- ಕನ್ನಡವನ್ನು ಅಧಿಕೃತ ಭಾಷೆಯಾಗಿ ಎಲ್ಲ ಹಂತಗಳಲ್ಲಿ ಅನುಷ್ಠಾನಗೊಳಿಸುವುದಕ್ಕೆ ಅಗತ್ಯವಾದ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ ಜಾರಿ.

## ಇಂಧನದ ಶಕ್ತಿ

- ವಿದ್ಯುತ್ ಸಂಪರ್ಕ ಕಾಣದ ಮನೆಗಳಿಗೆ ತ್ವರಿತವಾಗಿ ಕಾಲಮಿತಿಯೊಳಗೆ ವಿದ್ಯುತ್ ಸಂಪರ್ಕ ಕಲ್ಪಿಸುವ 'ಬೆಳಕು' ಯೋಜನೆ ಜಾರಿ.
- ಅಮೃತ ಜ್ಯೋತಿ' ಯೋಜನೆಯಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ನೀಡುವ ಉಚಿತ ವಿದ್ಯುತ್ ಪ್ರಮಾಣ 40 ಯೂನಿಟ್‌ನಿಂದ 75 ಯುನಿಟ್‌ಗೆ ಹೆಚ್ಚಳ.
- ವಿಫಲಗೊಂಡ ಟಾನ್ಸ್‌ಫಾರ್ಮರ್‌ಗಳನ್ನು 24 ಗಂಟೆಯೊಳಗಾಗಿ ಬದಲಾಯಿಸುವುದಕ್ಕೆ ಕ್ರಮ. ಇದಕ್ಕಾಗಿ ರಾಜ್ಯದ ಎಲ್ಲಾ ಕಂಪನಿ ವ್ಯಾಪ್ತಿಯಲ್ಲಿ 208 ಟ್ರಾನ್ಸಾರ್ಮರ್ ಬ್ಯಾಂಕ್ ಸ್ಥಾಪನೆ. 162 ದುರಸ್ಥಿ ಕೇಂದ್ರಗಳ ಸ್ಥಾಪನೆ.

## ಅಮೃತ ಮಹೋತ್ಸವದ ಅಮೃತ ಯೋಜನೆಗಳು

- ಅಮೃತ ಗ್ರಾಮ ಪಂಚಾಯ್ತಿ :750 ಗ್ರಾ.ಪಂ.ಗಳಲ್ಲಿ ಬೀದಿ ದೀಪ, ಸೌರವಿದ್ಯುತ್, ಕುಡಿಯುವ ನೀರು, ಡಿಜಿಟಲ್ ಲೈಬ್ರರಿಯುಕ್ತ ಶಾಲೆ, 100% ಘನ ತ್ಯಾಜ್ಯ ವಿಂಗಡಣೆ, ವಿಲೇವಾರಿ.
- ಅಮೃತ ಗ್ರಾಮೀಣ ವಸತಿ : 750 ಗ್ರಾ.ಪಂ.ಗಳಲ್ಲಿ ಆಶ್ರಯ ರಹಿತರನ್ನು ಗುರುತಿಸಿ ವಸತಿ ಕಲ್ಪಿಸುವ ಯೋಜನೆ
- ಅಮೃತ ಆರೋಗ್ಯ ಮೂಲಸೌಕರ್ಯ ಉನ್ನತೀಕರಣ: 750 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲ ಸೌಕರ್ಯಗಳ ವಿಸ್ತರಣೆ ಮತ್ತು ಉನ್ನತೀಕರಣ. ತಲಾ 20 ಲಕ್ಷ ರೂ.ಗಳಂತೆ 150 ಕೋ.ರೂ. ವೆಚ್ಚ.
- ಅಮೃತ ನಿರ್ಮಲ ನಗರ : 75 ನಗರ ಸ್ಥಳೀಯ ಸಂಸ್ಥೆಗಳ ಸ್ವಚ್ಛತೆ ಮತ್ತು ಸೌಂದರ್ಯ ಕಾಪಾಡಲು ತಲಾ 1 ಕೋ.ರೂ.ನಂತೆ 75 ಕೋಟಿ ರೂ. ಅನುದಾನ.
- ಅಮೃತ ಶಾಲಾ ಸೌಲಭ್ಯ: 750 ಶಾಲೆಗಳಿಗೆ ಸುಸಜ್ಜಿತ ಕಟ್ಟಡ, ಪ್ರಯೋಗಾಲಯ, ಗ್ರಂಥಾಲಯ, ಶೌಚಾಲಯ, ಸಮಗ್ರ ಸೌಲಭ್ಯ ಪೂರೈಕೆಗೆ ತಲಾ 10 ಲಕ್ಷ ರೂ.
- ಅಮೃತ ಕೌಶಲ್ಯ ತರಬೇತಿ : ಪ. ಜಾತಿ, ಪ. ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ ಸಮುದಾಯಗಳ 75,000 ಯುವಕ–ಯುವತಿಯರಿಗೆ 2 ವರ್ಷಗಳ ಕೌಶಲ್ಯಾಭಿವೃದ್ಧಿ ತರಬೇತಿ.
- ಅಮೃತ ನಗರೋತ್ಥಾನ : ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿ ಕಾರ್ಯದಲ್ಲಿ 75 ಕೊಳಗೇರಿ ಅಭಿವೃದ್ಧಿ ಹಾಗೂ 75 ಕೆರೆ ಉದ್ಯಾನಗಳ ಅಭಿವೃದ್ಧಿ.

## ಪ್ರಾಥಮಿಕ/ಪ್ರೌಢ/ಉನ್ನತ ಶಿಕ್ಷಣ

- ಮುಖ್ಯಮಂತ್ರಿ ವಿದ್ಯಾನಿಧಿ ಯೋಜನೆಯಡಿ ರೈತರು,ಕಾರ್ಮಿಕರು, ನೇಕಾರರು ಸಿಂಪಿಗರ ಹಾಗೂ ಆಟೋ ಮತ್ತು ಟ್ಯಾಕ್ಸಿ ಮಕ್ಕಳಿಗೆ' 11 ಲಕ್ಷ ವಿದ್ಯಾರ್ಥಿಗಳಿಗೆ ರೂ.484 ಕೋಟಿ ವಿದ್ಯಾರ್ಥಿವೇತನ ವಿತರಣೆ.
- ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಗೊಳಿಸಿದ ಮೊದಲ ರಾಜ್ಯ
- 1,240 ಉಪನ್ಯಾಸಕರು, 15,000 ಶಾಲಾ ಶಿಕ್ಷಕರ ನೇಮಕಾತಿ, ಸೇವಾನುಭವ ಆಧರಿಸಿ ಅತಿಥಿ ಉಪನ್ಯಾಸಕರ ಗೌರವಧನ ರೂ. 26,000–ರೂ ಗಳಿಂದ 32,000ಗಳಿಗೆ ಹೆಚ್ಚಳ.
- ವಿವೇಕ ಕೊಠಡಿ ಹೆಸರಿನಲ್ಲಿ ರೂ. 1,412 ಕೋಟಿ ವೆಚ್ಚದಲ್ಲಿ 8,101 ಪ್ರಾಥಮಿಕ ಮತ್ತು ಪ್ರೌಢ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಕ್ರಮ. 3 ಲಕ್ಷಕ್ಕಿಂತ ಹೆಚ್ಚು ಮಕ್ಕಳಿಗೆ ಅನುಕೂಲ.
- ಉತ್ತರಕನ್ನಡ ಜಿಲ್ಲೆಯ ಶಿರಸಿಯಲ್ಲಿ ಪ್ರಪ್ರಥಮ ಬಾರಿಗೆ ಪರಿಸರ ವಿಶ್ವ ವಿದ್ಯಾಲಯ ಸ್ಥಾಪನೆ.



## ಆರೋಗ್ಯಾಭಿವೃದ್ಧಿ

- "ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ" 31.74ಲಕ್ಷ ಕಾರ್ಡ್‌ಗಳನ್ನು ಫಲಾನುಭವಿಗಳಿಗೆ ವಿತರಣೆ.
- "ಆರೋಗ್ಯ ನಂದನ" 78.32ಲಕ್ಷ 0–18 ವರ್ಷ ವಯಸ್ಸಿನ ಹಿಂದುಳಿದ ವರ್ಗಗಳ ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣೆ.
- "ನಮ್ಮ ಕ್ಲಿನಿಕ್ ಸ್ಥಾಪನೆ" 438 ರಾಜ್ಯದ ಬಡ ಜನರಿಗೆ ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಾಗಿ ಸ್ಥಾಪನೆ.
- ಉಚಿತ ಡಯಾಲಿಸಿಸ್ ಸೇವೆಗಳನ್ನು ಪ್ರತಿ ತಿಂಗಳಿಗೆ ಈಗಿರುವ 30,000 ಸೈಕಲ್‌ಗಳಿಂದ 60,000 ಸೈಕಲ್‌ಗಳಿಗೆ ಹೆಚ್ಚಿಸಲು ರೂ. 20 ಕೋಟಿ ಹೆಚ್ಚುವರಿ ಅನುದಾನ.
- ಉತ್ತರ ಕರ್ನಾಟಕದಲ್ಲಿ ಹೈಟೆಕ್ ಚಿಕಿತ್ಸೆ ಕಲ್ಪಿಸಲು ಹುಬ್ಬಳ್ಳಿಯಲ್ಲಿ ಜಯದೇವ ಹೃದ್ರೋಗ ಕೇಂದ್ರವನ್ನು ರೂ. 250 ಕೋಟಿ ವೆಚ್ಚದಲ್ಲಿ ಸ್ಥಾಪನೆ. ಬೆಳಗಾವಿಯಲ್ಲಿ ರೂ. 50 ಕೋಟಿ ವೆಚ್ಚದಲ್ಲಿ ಕಿದ್ವಾಯಿ ಪ್ರಾದೇಶಿಕ ಕ್ಯಾನ್ಸರ್ ಕೇಂದ್ರ ಸ್ಥಾಪನೆ.

## ಸಾಮಾಜಿಕ ಹಿತಾಸಕ್ತಿ

- ಮೀನುಗಾರರ ಆದಾಯ ಹೆಚ್ಚಿಸಲು 100 ಆಳ ಸಮುದ್ರ ಮೀನುಗಾರಿಕಾ ದೋಣಿಗಳಿಗೆ ನೆರವು ನೀಡುವ "ಮತ್ಸ್ಯಸಿರಿ" ಯೋಜನೆ.
- ಆರ್ಥಿಕವಾಗಿ ಹಿಂದುಳಿದ ಕುರಿಗಾಹಿಗಳಿಗೆ ಕುರಿ/ಮೇಕೆ ಘಟಕ ಸ್ಥಾಪಿಸಲು ಶೇ.25 ರಷ್ಟು ಸಹಾಯಧನ ನೀಡಲು ರೂ.355 ಕೋಟಿ ಮೀಸಲು. 20 ಸಾವಿರ ಕುರಿಗಾಹಿಗಳಿಗೆ ಯೋಜನೆಯ ಲಾಭ.
- ಕಟ್ಟಡ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿವೇತನ ಯೋಜನೆ ಜಾರಿ. 2.97ಲಕ್ಷ ವಿದ್ಯಾರ್ಥಿಗಳಿಗೆ ರೂ.462.12 ಕೋಟಿ.
- **ಸಾಮಾಜಿಕ ಭದ್ರತೆ:** ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ, ವಿಧವಾ ವೇತನ, ಮೈತ್ರಿ, ಮನಸ್ವಿನಿ, ವಿಕಲಚೇತನರ ಮಾಸಾಶನ ಹಾಗೂ ಆಸಿಡ್ ದಾಳಿ ಸಂತ್ರಸ್ತರ ಯೋಜನೆಗಳ ಪಿಂಚಣಿ ಮೊತ್ತ ಹೆಚ್ಚಳ. 75ಲಕ್ಷ ಫಲಾನುಭವಿಗಳಿಗೆ ಅನುಕೂಲ.
- "ಗೃಹಿಣಿ ಶಕ್ತಿ" ಯೋಜನೆ: ಕೋವಿಡ್ ಹಾಗೂ ಪ್ರವಾಹದಿಂದ ಸಂಕಷ್ಟಕ್ಕೆ ಸಿಲುಕಿರುವ ಬಡ ಕುಟುಂಬಗಳ ಮನೆ ವೆಚ್ಚ ನಿರ್ವಹಣೆಗಾಗಿ, ಮನೆಯ ಮುಖ್ಯಸ್ಥೆಯಾದ ಮಹಿಳೆಯರಿಗೆ ಸಹಾಯಧನ ನೀಡುವ ವಿಶೇಷ ಯೋಜನೆ.



## ಬೆಂಗಳೂರಿಗೆ ಬಿಜೆಪಿ ಸರ್ಕಾರದ ಕೊಡುಗೆ

ಬಿಬಿಎಂಪಿಗೆ ನೀಡಿರುವ ಅನುದಾನ

- ಹಿಂದಿನ ಸರ್ಕಾರದ ಆದಧಿಯಲ್ಲಿ (2013–2018) ರೂ.13,906.68 ಕೋಟಿ, ಪ್ರಸಕ್ತ ಸರ್ಕಾರದ ಅವಧಿಯಲ್ಲಿ (2019–2023) ರೂ.18,697.87 ಕೋಟಿ

ಬೆಂಗಳೂರು ಮೆಟ್ರೊಗೆ ನೀಡಿರುವ ಅನುದಾನ

- ಹಿಂದಿನ ಸರ್ಕಾರದ ಅವಧಿಯಲ್ಲಿ (2013–2018) ರೂ.11,305.94 ಕೋಟಿ, ಪ್ರಸಕ್ತ ಸರ್ಕಾರದ ಅವಧಿಯಲ್ಲಿ (2019–2023) ರೂ.23,352.89 ಕೋಟಿ

BWSSB ಗೆ ಸರ್ಕಾರ ನೀಡಿರುವ ಸಂಪನ್ಮೂಲ

- ಹಿಂದಿನ ಸರ್ಕಾರದ ಅವಧಿಯಲ್ಲಿ (2013–2018) ರೂ.1,230.67 ಕೋಟಿ, ಪ್ರಸಕ್ತ ಸರ್ಕಾರದ ಅವಧಿಯಲ್ಲಿ (2019–2023) ರೂ.3,131.46 ಕೋಟಿ

ನವ ನಗರೋತ್ಥಾನ ಯೋಜನೆ

- ಕೆರೆಗಳ ಅಭಿವೃದ್ಧಿಗೆ ನವನಗರೋತ್ಥಾನ ಯೋಜನೆಯಡಿಯಲ್ಲಿ ರೂ.317.25 ಕೋಟಿ ವೆಚ್ಚದಲ್ಲಿ 47 ಕೆರೆಗಳ ಅಭಿವೃದ್ಧಿ.
- ಬೆಂಗಳೂರಿಗೆ 243 ನಮ್ಮ ಕ್ಲಿನಿಕ್: 106 ಕ್ಲಿನಿಕ್‌ಗಳ ಕಾಮಗಾರಿಗಳು ಪೂರ್ಣ. 137 ಕ್ಲಿನಿಕ್‌ಗಳ ಕಾಮಗಾರಿ ಪ್ರಗತಿಯಲ್ಲಿ.
- 'ಫಿಕ್ಸ್ ಮೈ ಸ್ಟ್ರೀಟ್' ತಂತ್ರಾಂಶ ಅಳವಡಿಕೆ, ಪಾರದರ್ಶಕತೆ ಹಾಗೂ ರಸ್ತೆಗುಂಡಿ ಮುಚ್ಚುವ ಖರ್ಚಿನಲ್ಲಿ ಗಣನೀಯ ಉಳಿತಾಯ

**ಬೆಂಗಳೂರು ಮೆಟ್ರೋ ರೈಲು ಯೋಜನೆ 2ನೇ ಹಂತ**

- **ರೀಚ್–1:** ಕೆ.ಆರ್.ಪುರಂ ಹಾಗೂ ವೈಟ್ ಫೀಲ್ಡ್ ನಡುವಿನ 13.71 ಕಿ.ಮೀ.ವರೆಗಿನ ಮೆಟ್ರೋ ಮಾರ್ಗ ಆರಂಭ. ಬೈಯ್ಯಪ್ಪನಹಳ್ಳಿಯಿಂದ ಕೆ.ಆರ್. ಪುರಂ.ವರೆಗಿನ 2.10 ಕಿ.ಮೀ. ವಿಸ್ತರಿಸಿದ ಮಾರ್ಗ ಮಾನ್ಯ ಪ್ರಧಾನಿಯವರಿಂದ ಚಾಲನೆ. .

- **ರೀಚ್–2:** ಮೈಸೂರು ರಸ್ತೆ ನಿಲ್ದಾಣದಿಂದ ಕೆಂಗೇರಿ ನಿಲ್ದಾಣದವರೆಗಿನ 7.53 ಕಿ.ಮೀ. ಮೆಟ್ರೋ ಮಾರ್ಗಕ್ಕೆ 29.08.2021ರಂದು ಚಾಲನೆ.

**ಜನರಿಗೆ ಹತ್ತಿರವಾದ ಕಂದಾಯ ಇಲಾಖೆ**

- ದಿನಾಂಕ: 18.01.2021 ರಿಂದ ರಾಜ್ಯಾದ್ಯಂತ "ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ" ಕಾರ್ಯಕ್ರಮ ಪ್ರಾರಂಭ.
- ಕರ್ನಾಟಕ ಭೂಸುಧಾರಣೆಗಳು 1961ರ ಕಲಂ 79ಎ ಮತ್ತು 799 ರದ್ದು
- ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 94ಸಿ ಮತ್ತು 94ಸಿಸಿ ಗೆ ತಿದ್ದುಪಡಿ
- ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಮನೆಗಳನ್ನು ಸಕ್ರಮ ಮಾಡುವ ಸಂಬಂಧ 946 ಮತ್ತು 94ಸಿಸಿ ಅರ್ಜಿ ಸಲ್ಲಿಸಲು ಒಂದು ವರ್ಷದವರೆಗೆ ಕಾಲಾವಕಾಶ ವಿಸ್ತರಣೆ.
- ಹಲೋ, ಕಂದಾಯ ಸಚಿವರೆ, ಸಹಾಯವಾಣಿ 155245 ಗೆ ಕರೆ ಮೂಲಕ ಪಿಂಚಣಿ ಸೌಲಭ್ಯಕ್ಕೆ ಕೋರಿಕೆ. 72 ಗಂಟೆಯಲ್ಲಿ ಮನೆ ಬಾಗಿಲಿಗೆ ಪಿಂಚಣಿ ವ್ಯವಸ್ಥೆ.



**ಕರಾವಳಿ ಕರ್ನಾಟಕದ ಅಭಿವೃದ್ಧಿಗೆ ರಾಜ್ಯ ಸರ್ಕಾರದ ಮಹತ್ವದ ಕ್ರಮಗಳು**

- ಪಿಎಂ ಮತ್ಸ್ಯ ಸಂಪದ ಯೋಜನೆಯಡಿ (ಪಿಎಂಎಂಎಸ್‌ವೈ) ರೂ.120 ಕೋಟಿ ವೆಚ್ಚದಲ್ಲಿ ಮೀನು ಉತ್ಪಾದನೆ, ರಫ್ತು ಸಾಮರ್ಥ್ಯ ವೃದ್ಧಿ ಹಾಗೂ ಉದ್ಯೋಗಗಳ ಸೃಷ್ಟಿಗಾಗಿ 100 ಆಳ ಸಮುದ್ರ ದೋಣಿಗಳಿಗೆ ಅನುಮೋದನೆ ನೀಡಲಾಗಿದೆ.
- ಉತ್ತರಕನ್ನಡ ಜಿಲ್ಲೆಯ ಮಜಲಿಯಲ್ಲಿ ಭಾರತ ಸರ್ಕಾರ (ಸಾಗರಮಾಲ ಹಾಗೂ ಪಿಎಂಎಂಎಸ್'ವೈ ಯೋಜನೆಗಳಡಿ) ಹಾಗೂ ಕರ್ನಾಟಕ ಸರ್ಕಾರದ ವತಿಯಿಂದ ಒಟ್ಟು ಅಂದಾಜು ರೂ.250 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಮೀನುಗಾರಿಕೆ ಬಂದರು ಅಭಿವೃದ್ಧಿ.
- ಕಾರವಾರ ಬಂದರಿನಲ್ಲಿ ಕೇಂದ್ರದ ಸಾಗರಮಾಲಾ ಕರಾವಳಿ ಬರ್ತ್ ಯೋಜನೆಯಲ್ಲಿ ರೂ.276 ಕೋಟಿ ಮೊತ್ತದಲ್ಲಿ ಅಭಿವೃದ್ಧಿ ಯೋಜನೆಗಳು ಅನುಷ್ಠಾನದಲ್ಲಿವೆ.
- ಹಳೆ ಮಂಗಳೂರು ಬಂದರಿನಲ್ಲಿ ಅಂದಾಜು ರೂ.65 ಕೋಟಿ ವೆಚ್ಚದಲ್ಲಿ 350 ಮೀ.ಕರಾವಳಿ ಬರ್ತ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.
- ಹೊನ್ನಾವರ ತಾಲ್ಲೂಕಿನ ಪವಿನಕುರ್ವೆಯಲ್ಲಿ ಸಾರ್ವಜನಿಕ–ಖಾಸಗಿ ಪಾಲುದಾರಿಕೆಯಲ್ಲಿ (ಪಿಪಿಪಿ) ಅಂದಾಜು ರೂ.2,000 ಕೋಟಿ ವೆಚ್ಚದಲ್ಲಿ 12 ಎಂಟಿಪಿಎ ಆಳ ನೀರು ಸರ್ವಋತು ಗ್ರೀನ್ ಫೀಲ್ಡ್ ಬಂದರು ಅಭಿವೃದ್ಧಿ
- ಸಾಗರಮಾಲಾ ಯೋಜನೆಯಡಿ ಬೆಂಗ್ರೆ ಅನ್ನಲರಿ ಅಂಡ್ ಬೀಚ್ ಫ್ರಂಟ್ ಡೆವಲಪ್ಮೆಂಟ್, ಗುರುಪುರ ನದಿ ದ್ವೀಪಗಳ ಅಭಿವೃದ್ಧಿ ಯೋಜನೆ, ರೋ ರೋ ರೋ ಪ್ಯಾಕ್ಸ್ ಜೆಟ್ಟಿ ಯೋಜನೆಗಳಿಗೆ ಈಗಾಗಲೇ ಒಟ್ಟು ರೂ.48.12 ಕೋಟಿಗಳಿಗೆ ಮಂಜೂರಾತಿ.
- ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ, ಕರ್ನಾಟಕದ ಕರಾವಳಿ ಭಾಗಗಳಲ್ಲಿ ವಾಸಿಸುತ್ತಿರುವ ಯುವಜನರಿಗಾಗಿ ಉದ್ಯೋಗ ಸೃಷ್ಟಿಸಲು ಮತ್ತು ಕೈಗಾರಿಕೆಗೆ ಬೇಕಾದಂತಹ ಕೌಶಲ್ಯಗಳನ್ನು ಒದಗಿಸಲು ಅಂದಾಜು ರೂ.30.35 ಕೋಟಿ ವೆಚ್ಚದಲ್ಲಿ ಕಡಲು ಸಂಬಂಧಿತ ತರಬೇತಿ ಸಂಸ್ಥೆ ಸ್ಥಾಪನೆ.



**ಕೇಂದ್ರ ಸರಕಾರದ ಪ್ರಮುಖ ನಿರ್ಧಾರಗಳು**

- ಕಾಶ್ಮೀರದಲ್ಲಿ ಆರ್ಟಿಕಲ್ 370 ಮತ್ತು 35ಎ ರದ್ಧತಿ.
- ಪಾಕಿಸ್ತಾನದ ಭಯೋತ್ಪಾದನೆಯ ನಿಗ್ರಹಕ್ಕಾಗಿ ಎರಡು ಬಾರಿ ಸರ್ಜಿಕಲ್ ದಾಳಿ.
- ಸಾಕಾರವಾದ ರಾಮ ಮಂದಿರ ನಿರ್ಮಾಣ.
- ಮುಸ್ಲಿಂ ಹೆಣ್ಣು ಮಕ್ಕಳ ವೈಯುಕ್ತಿಕ ಹಕ್ಕುಗಳ ರಕ್ಷಣೆಗಾಗಿ ತ್ರಿವಳಿ ತಲಾಖ್ ಕಾಯ್ದೆ ಜಾರಿ.
- ಯೋಜನ ಆಯೋಗದ ಬದಲಿಗೆ ದೇಶದಲ್ಲಿ ನೀತಿ ಆಯೋಗದ ಸ್ಥಾಪನೆ.
- ಕೋವಿಡ್ ಸಂಕಷ್ಟದ ಯಶಸ್ವಿ ನಿರ್ವಹಣೆ, ದೇಶದಲ್ಲೇ ಪರಿಣಾಮಕಾರಿಯಾದ ಲಸಿಕೆ ತಯಾರಿಕೆ. ಪ್ರತಿಯೊಬ್ಬ ನಾಗರೀಕನಿಗೂ ಉಚಿತ ನೀಡಿಕೆ.
- ವಿದೇಶದಲ್ಲಿ ಸಂಕಷ್ಟದಲ್ಲಿದ್ದ ಭಾರತೀಯರನ್ನು ಸುರಕ್ಷಿತವಾಗಿ ಭಾರತಕ್ಕೆ ಮರಳಿ ಕರೆತಂದಿರುವುದು. ಯುದ್ಧಗ್ರಸ್ಥ ಯಮನ್‌ನಿಂದ ದಾದಿಯರ, ವಂದೇ ಭಾರತ್ ಮಿಷನ್ ಮೂಲಕ ಒಂದು ಕೋಟಿಗೂ ಅಧಿಕ ಭಾರತೀಯರ, ಆಪರೇಷನ್ ಗಂಗಾ ಮೂಲಕ ರಷ್ಯಾ ಮತ್ತು ಉಕ್ರೇನ್ ಯುದ್ಧದ ಸಂದರ್ಭದಲ್ಲಿ ಉಕ್ರೇನ್‌ನಲ್ಲಿ ಸಿಲುಕಿದ್ದ ಸುಮಾರು 25 ಸಾವಿರಕ್ಕೂ ಅಧಿಕ ದ್ಯಾರ್ಥಿಗಳ ಸುರಕ್ಷಿತ ವಾಪಸಾತಿವಾಗಿ ಕ್ರಮ.
- ಡಿಜಿಟಲ್ ಬ್ಯಾಂಕಿಂಗ್ ಮೂಲಕ ಸರಕಾರದ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ (DBT).

- ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿಯಲ್ಲಿ 11.3 ಕೋಟಿ ರೈತರಿಗೆ 1.82 ಲಕ್ಷ ಕೋಟಿ ರುಪಾಯಿಗಳ ಆರ್ಥಿಕ ನೆರವು.
- ಉಜ್ವಲ ಯೋಜನೆ ಅಡಿಯಲ್ಲಿ 9 ಕೋಟಿ ಎಲ್ ಪಿ ಜಿ ಸಂಪರ್ಕ.
- ಬಾಬಾ ಸಾಹೇಬ್ ಅಂಬೇಡ್ಕರ್ ಸ್ಮರಣಾರ್ಥ 5 ಸ್ಥಳಗಳನ್ನು ಪಂಚತೀರ್ಥಗಳಾಗಿ ಅಭಿವೃದ್ಧಿ.
- ಶ್ರೀ ಕಾಶಿ ವಿಶ್ವನಾಥ ಕ್ಷೇತ್ರ ಮತ್ತು ಕೇದಾರನಾಥ ಕ್ಷೇತ್ರಗಳ ಜೀರ್ಣೋದ್ಧಾರ.
- ರಾಷ್ಟ್ರೀಯ ಶಿಕ್ಷಣ ನೀತಿ – 2022 ಜಾರಿ.
- 2013–14 ರಲ್ಲಿ ಪ್ರತೀ ದಿನ 17ನ ಕಿಮೀ ನಷ್ಟು ನಿರ್ಮಾಣವಾಗುತ್ತಿದ್ದ ರಾಷ್ಟ್ರೀಯ ಹೆದ್ದಾರಿ, ಪ್ರಸ್ತುತ ಪ್ರತೀ ದಿನಕ್ಕೆ 37 ಕಿಮೀಗೆ ಹೆಚ್ಚಳ.
- 8727 ಜನೌಷಧಿ ಕೇಂದ್ರಗಳಲ್ಲಿ ಕೈಗೆಟಕುವ ದರದಲ್ಲಿ ಔಷಧಿಗಳ ಮಾರಾಟ.



## ಕರ್ನಾಟಕಕ್ಕೆ ಕೇಂದ್ರ ಸರಕಾರದ ಯೋಜನೆಗಳ ಫಲ

- ಕರ್ನಾಟಕದಲ್ಲಿ ಪ್ರಧಾನಮಂತ್ರಿ ಜನಧನ್ ಯೋಜನೆ ಫಲಾನುಭವಿಗಳ ಸಂಖ್ಯೆ 1,72,15,664. ಖಾತೆಯಲ್ಲಿ ಜಮೆಯಾದ ಮೊಬಲಗು ಒಟ್ಟು 6,918.40 ಕೋಟಿ ರೂಗಳು.
- ಪ್ರಧಾನ ಮಂತ್ರಿ ಸುಕನ್ಯಾ ಸಮೃದ್ಧಿ ಯೋಜನೆಯ ಫಲಾನುಭವಿಗಳ ಸಂಖ್ಯೆ 22,52,894. ಜಮೆಯಾದ ಮೊಬಲಗು 15,698.14 ಕೋಟಿ ರೂಗಳು.
- ಪ್ರಧಾನ ಮಂತ್ರಿ ಮುದ್ರಾ ಯೋಜನೆಯಡಿ ಕರ್ನಾಟಕದ ಉದ್ಯಮಗಳಿಗೆ ನೀಡಲಾದ ಸಾಲ ಸೌಲಭ್ಯ 1,47,863.89 ಕೋಟಿ ರೂಗಳು.
- ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ ಕರ್ನಾಟಕದಲ್ಲಿ ಮನೆಗಳ ನಿರ್ಮಾಣಕ್ಕೆ ಅನುಮೋದನೆ ದೊರಕಿದ ಮನೆಗಳ ಸಂಖ್ಯೆ 7,06,320. ಈವರೆಗೆ ಪೂರ್ಣಗೊಂಡು ಹಸ್ತಾಂತರವಾಗಿರುವ ಮನೆಗಳ ಸಂಖ್ಯೆ 2,94,209. ಉಳಿದವು ಪ್ರಗತಿಯಲ್ಲಿವೆ.
- ಪ್ರಧಾನ ಮಂತ್ರಿ ಬೆಳೆ ವಿಮೆ ಯೋಜನೆಯಡಿ ರಾಜ್ಯದಲ್ಲಿ ಬೆಳೆ ವಿಮೆ ಮಾಡಿಸಿದ ರೈತರ ಸಂಖ್ಯೆ 90,00,000.
- ಸ್ವಚ್ಛ ಭಾರತ ಅಭಿಯಾನದಡಿ 2014 ರಿಂದ 2022 ತನಕ ಕರ್ನಾಟಕದಲ್ಲಿ ನಿರ್ಮಾಣವಾದ ಶೌಚಾಲಯಗಳ ಸಂಖ್ಯೆ 46,31,316.
- ಮೇಕ್ ಇನ್ ಇಂಡಿಯಾ, ಸ್ಟಾರ್ಟ್‌ಪ್ ಇಂಡಿಯಾ ಯೋಜನೆಗಳ ಕಾರಣಕ್ಕೆ ಕರ್ನಾಟಕದಲ್ಲಿ ಹೂಡಿಕೆಯಾದ ವಿಶ್ವ ದರ್ಜೆಯ ಸಂಶೋಧನಾ ಸಂಸ್ಥೆಗಳು 400. ಹೂಡಿಕೆಯಾದ ಸ್ಟಾರ್ಟ್‌ಪ್‌ಗಳು 4000ಕ್ಕೂ ಅಧಿಕ.
- ನೀತಿ ಆಯೋಗದ ರ್‍ಯಾಂಕಿಂಗ್‌ನಲ್ಲಿ ದೇಶದಲ್ಲೇ ಒಂದನೇ ಸ್ಥಾನ ಪಡೆದಿದ್ದರೆ. ವಿಶ್ವಮಟ್ಟದಲ್ಲಿ ಕರ್ನಾಟಕಕ್ಕೆ ಮೂರನೇ ಸ್ಥಾನ. ಬೆಂಗಳೂರಿನಂದಲೇ 19 ಯೂನಿಕಾರ್ನ್‌ಗಳ ಉದಯ.
- ಕರ್ನಾಟಕದ ರೈತರಿಗೆ ನೀಡಲಾದ ಸಾಯಿಲ್ ಹೆಲ್ತ್ ಕಾರ್ಡುಗಳ ಸಂಖ್ಯೆ 78,32,189.
- ಸ್ಕಿಲ್ ಇಂಡಿಯಾ ಯೋಜನೆಯ ಮುಖಾಂತರ ಕರ್ನಾಟಕದಲ್ಲಿ ಪ್ರಧಾನಮಂತ್ರಿ ಕೌಶಲ್ಯ ವಿಕಾಸ ಯೋಜನೆಯಡಿಯಲ್ಲಿ ತೆರೆಯಲಾದ ಕೇಂದ್ರಗಳು 279. ಜನ ಶಿಕ್ಷಣ ಸಂಸ್ಥೆಯ ಮೂಲಕ ತೆರೆಯಲಾದ ಕೇಂದ್ರಗಳು 9. ತೆರಯಲಾದ ಖಖಖ ತರಬೇತಿ ಕೇಂದ್ರಗಳ ಸಂಖ್ಯೆ 1498.
- ಪಂಡಿತ್ ದೀನದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ ಕರ್ನಾಟಕದಾದ್ಯಂತ ತೆರೆಯಲಾದ ಕೇಂದ್ರಗಳು 277.
- ಸ್ಮಾರ್ಟ್ ಸಿಟಿ ಯೋಜನೆಯಡಿ ರಾಜ್ಯದ 7 ನಗರಗಳ ಅಭಿವೃದ್ದಿಗೆ ಬಿಡುಗಡೆಯಾದ ಹಣ 14 ಸಾವಿರ ಕೋಟಿ ರೂಪಾಯಿ.
- ಪ್ರಧಾನಮಂತ್ರಿ ಉಜ್ವಲ ಯೋಜನೆಯಡಿ ರಾಜ್ಯದಲ್ಲಿ ಉಚಿತ ಎಲ್‌ಪಿಜಿ ಗ್ಯಾಸ್ ಸಂಪರ್ಕ ಪಡೆದವರ ಸಂಖ್ಯೆ 36,21,63.
- ಧಾರಡಾದಲ್ಲಿ ಐಐಟಿ ಸ್ಥಾಪನೆ.
- ಅಮೃತ್ ಯೋಜನೆಯಡಿಯಲ್ಲಿ ಕರ್ನಾಟಕದ 27 ನಗರಗಳ ಅಭಿವೃದ್ದಿಗೆ 4,953 ಕೋಟಿ ರೂಪಾಯಿ.
- ಸ್ವದೇಶ ದರ್ಶನ ಯೋಜನೆಯಡಿಯಲ್ಲಿ ರಾಜ್ಯದ ಹಂಪಿ ಮತ್ತು ಮೈಸೂರುಗಳನ್ನು ಉತ್ತಮ ಪ್ರವಾಸಿ ತಾಣವಾಗಿ ಅಭವೃದ್ದಿಪಡಿಸುವಲ್ಲಿ ಕೇಂದ್ರ ಸರಕಾರ ಕ್ರಮ.
- ಕೇಂದ್ರದಿಂದ ರಾಷ್ಟೀಯ ಪಾರಂಪರಿಕ ತಾಣಗಳ ಅಭಿವೃದ್ದಿ ಯೋಜನೆಯಡಿ ಕರ್ನಾಟಕದ ಬಾದಾಮಿಯನ್ನು ಅಭಿವೃದ್ದಿಪಡಿಸುವ ಯೋಜನೆ.

- ಉಡಾನ್ ಯೋಜನೆ ಅಡಿಯಲ್ಲಿ ಕರ್ನಾಟಕದಲ್ಲಿ 90 ಹೊಸ ವಾಯು ಮಾರ್ಗಗಳ ಆರಂಭ. ಜೊತೆಗೆ ಬೆಳಗಾವಿ, ಹುಬ್ಬಳ್ಳಿ, ಮೈಸೂರು, ವಿದ್ಯಾನಗರ, ಕಲ್ಬುರ್ಗಿ ಬೀದರ್ ಗಳಲ್ಲಿ ಹೊಸ ವಿಮಾನ ನಿಲ್ದಾಣಗಳು ಕಾರ್ಯಾರಂಭ.
- ಪ್ರಧಾನಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆಯ ಅಡಿ ಕರ್ನಾಟಕದಲ್ಲಿ ನೊಂದಾಯಿತರಾದ ವಿಮಾದಾರರು 49,95,606. ಪಾವತಿಸಲಾದ ವಿಮಾ ಕ್ಲೈಮ್‌ಗಳ ಮೊತ್ತ 741.42 ಕೋಟಿ ರೂಪಾಯಿ.
- ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆ ಅಡಿಯಲ್ಲಿ ಕರ್ನಾಟಕದಲ್ಲಿ ನೋಂದಾಯಿತರಾದ ವಿಮಾದಾರರು 1.1ಕೋಟಿ. ಕ್ಲೈಮ್ ಪಾವತಿಸಿದ ಮೊಬಲಗು 144.12 ಕೋಟಿ ರೂ.
- ಅಟಲ್ ಪಿಂಚಣಿ ಯೋಜನೆಯಡಿ ಕರ್ನಾಟಕದಲ್ಲಿ ಪಿಂಚಣಿ ಪಡೆಯುತ್ತಿರುವವರ ಸಂಖ್ಯೆ 22.06 ಲಕ್ಷ.
- ಸ್ಟ್ಯಾಂಡಪ್ ಇಂಡಿಯಾ ಯೋಜನೆಯಡಿ ಕರ್ನಾಟಕದಲ್ಲಿ 7,940 ಕಿರು ಉದ್ಯಮಗಳಿಗೆ ಮಂಜೂರು ಮಾಡಲಾದ ಹಣ 1,845 ಕೋಟಿ ರೂ.
- ತುರ್ತು ಸಾಲ ಮಂಜೂರಾತಿ ಯೋಜನೆ (Emergency Credit Line Guarantee Scheme) ರಾಜ್ಯದಲ್ಲಿ 9.77 ಲಕ್ಷ ಸಣ್ಣ ಮತ್ತು ಮದ್ಯಮ ಕೈಗಾರಿಕೆಗೆ ಒದಗಿಸಲಾದ ಸಾಲದ ಮೊಬಲಗು 21,709 ಕೋಟಿ ರೂ.
- ಪ್ರದಾನಮಂತ್ರಿ ರೈತ ಕ್ರೆಡಿಟ್ ಕಾರ್ಡ್ ಯೋಜನೆಯಡಿ ರಾಜ್ಯದ 17.48 ಲಕ್ಷ ರೈತರಿಗೆ ವಿತರಿಸಲಾಗದ ಸಾಲ ತಲಾ 19,950 ರೂ.
- ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ರಾಜ್ಯದ 50 ಲಕ್ಷ ರೈತರಿಗೆ ಕೇಂದ್ರದಿಂದ ಬಿಡುಗಡೆಯಾದ ಹಣ 10,701 ಕೋಟಿ ರೂ.
- ಪ್ರಧಾನಮಂತ್ರಿ ಪ್ರತಿ ಮನೆಗೆ ನಲ್ಲಿ ನೀರು ಪೂರೈಸುವ ಯೋಜನೆಯಡಿ ರಾಜ್ಯದಲ್ಲಿ ಗುರ್ತಿಸಲಾದ ಮನೆಗಳು 1.17 ಕೋಟಿ. ಈ ಪೈಕಿ ಸಂಪರ್ಕ ನೀಡಲಾದ ಮನೆಗಳ ಸಂಖ್ಯೆ 58.60 ಲಕ್ಷ.
- ಉಜಾಲ ಯೋಜನೆಯಡಿ ರಾಜ್ಯದಲ್ಲಿ ವಿತರಿಸಲಾದ ಬಲ್ಬ್‌ಗಳ ಸಂಖ್ಯೆ 1.88 ಕೋಟಿ.
- 2009 ರಿಂದ 2014ರ ತನಕ, ಯುಪಿಎ ಕಾಲಾವದಿಯಲ್ಲಿ ಕೇಂದ್ರ ಹಣಕಾಸು ಆಯೋಗದಿಂದ ರಾಜ್ಯಕ್ಕೆ ಬಂದ ಸರಾಸರಿ ಅನುದಾನ 2,353 ಕೋಟಿ ರೂ. 2014ರಿಂದ 2023 ರ ತನಕ ಮೋದಿ ಸರಕಾರದ ಕಾಲದಲ್ಲಿ ಬಿಡುಗಡೆಯಾದ ಸರಾಸರಿ ಅನುದಾನ 5000 ಕೋಟಿ ರೂ. 2014 ರಿಂದ 2023 ರ ತನಕ ರಾಜ್ಯಕ್ಕೆ ಬಿಡುಗಡೆಯಾದ ಅನುದಾನ 45 ಸಾವಿರ ಕೋಟಿ ರೂ.
- 2022–23 ರ ಅಂತ್ಯದ ವೇಳೆಗೆ ರಾಜ್ಯದಲ್ಲಿ ಪ್ರಮುಖ ಯೋಜನೆಗಳ ಮೂಲಕ ನಿರ್ಮಿಸ ಬೇಕೆಂದಿರುವ ರಸ್ತೆ ನಿರ್ಮಾಣದ ಗುರಿ 1,064 ಕಿ.ಮೀ. ರಾಜ್ಯಕ್ಕೆ ಕಾದಿರಸಲಾದ ಹಣ 33,913 ಕೋಟಿ ರೂ.



## ಕೇಂದ್ರ ಸರಕಾರದಿಂದ ಅನುಷ್ಠಾನಗೊಂಡ ಯೋಜನೆಗಳ ವಿವರ

- 30,600 ಕೋಟಿ ರೂ ವೆಚ್ಚದಲ್ಲಿ ಹೈದರಾಬಾದ್–ಬೆಂಗಳೂರು ನಡುವಿನ 110 ಕಿಮೀ ಎಕ್ಸ್‌ಪ್ರೆಸ್‌ವೇ ಅಭಿವೃದ್ಧಿ.
- 6,600 ಕೋಟಿ, ವೆಚ್ಚದಲ್ಲಿ ಹೈದರಾಬಾದ್ ಮತ್ತು ಬೆಂಗಳೂರಿನಿಂದ ಉತ್ತರ–ದಕ್ಷಿಣ ಕಾರಿಡಾರ್ ರಸ್ತೆಯ ವಿಸ್ತರಣೆ. ಪ್ರಯಾಣದ ಸಮಯವನ್ನು 12 ಗಂಟೆಗಳಿಂದ 5 ಗಂಟೆಗಳವರೆಗೆ ಕಡಿಮೆ.
- 11,071 ಕೋಟಿ ರೂಪಾಯಿ ವೆಚ್ಚದಲ್ಲಿ ಸೋಲ್ಲಾಪುರ–ಕರ್ನೂಲ್–ಚೆನ್ನೈ ಕಾರಿಡಾರ್ ರಸ್ತೆ ಯೋಜನೆಯಡಿ. 335 ಕಿ.ಮೀ. ರಸ್ತೆ ಅಭಿವೃದ್ಧಿ. ಇದರಲ್ಲಿ 177 ಕಿ.ಮೀ ರಸ್ತೆ ಕರ್ನಾಟಕದಲ್ಲಿ ನಿರ್ಮಾಣ.
- 1,200 ಕೋಟಿ ರೂಪಾಯಿ ವೆಚ್ಚದಲ್ಲಿ ಮೈಸೂರು ರಿಂಗ್ ರಸ್ತೆಯನ್ನು ನಿರ್ಮಾಣ ಮಾಡುವ ಯೋಜನೆ.

## ಕರ್ನಾಟಕದಲ್ಲಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ

- ಕರ್ನಾಟಕದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಉದ್ದವು 2014–15 ರ 2021–22 ನಡುವೆ 24% ರಷ್ಟು ಹೆಚ್ಚಳ. 1 ನೇ ಏಪ್ರಿಲ್, 2014 ರಂತೆ 6,177 ಕಿ ಮೀ ಇದ್ದ ರಸ್ತೆ ಉದ್ದ ಪ್ರಸ್ತುತ 7,656 ಕಿ ಮೀ ಗೆ ಏರಿಕೆ.
- ಕೇಂದ್ರವು 2014–15 ರಿಂದ 2021–22 ನಡುವೆ 4,601 ಕಿ.ಮೀ ಮಾಡುವ ಯೋಜನೆ ರೂಪಿಸಿದ್ದು ಈಗಾಗಲೇ 3,796 ಕಿ ಮಿ ನಷ್ಟು ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಾಣ ಕಾರ್ಯ ಪೂರ್ಣ.
- ಕಳೆದ ಏಳು ವರ್ಷಗಳಲ್ಲಿ ಕೇಂದ್ರವು ಕರ್ನಾಟಕದಲ್ಲಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಗೆ ವಿನಿಯೋಗಿಸಲಾದ ಹಣ 37,510 ಕೋಟಿ ರೂ.
- ಭಾರತಮಾಲಾ ಪರಿಯೋಜನೆಯಡಿ ರಾಜ್ಯದಲ್ಲಿ ಸುಮಾರು 54,702 ಕೋಟಿ ರೂ.ಗಳ ವೆಚ್ಚದಲ್ಲಿ 1,681 ಕಿಮೀ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಮಾಡುವ ಯೋಜನೆ ಸಿದ್ಧ.
- 262 ಕಿಮೀ ಉದ್ದದ ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್‌ವೇ 16,730 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣದ ಹಂತದಲ್ಲಿ. ಇದರಲ್ಲಿ 71 ಕಿಮೀ ಕರ್ನಾಟದಲ್ಲಿ ಹಾದು ಹೋಗುತ್ತಿದೆ. ಈ ಯೋಜನೆಯಿಂದ ಪ್ರಮುಖ ನಗರಗಳಾದ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಪೂರ್ವ ತುದಿಯಲ್ಲಿರುವ ನಗರಗಳಾದ ಕಾಂಚೀಪುರಂ, ಶ್ರೀಪೆರಂಬದೂರ್‌ಗಳಿಗೆ ಸಂಪರ್ಕ ಮತ್ತು ಬೆಂಗಳೂರು ಮತ್ತು ಚೆನ್ನೈ ನಡುವಿನ ಪ್ರಯಾಣದ ಸಮಯ 5 ಗಂಟೆಗಳಿಂದ 3 ಗಂಟೆಗಳವರೆಗೆ ಕಡಿಮೆ.
- 2014 ರಿಂದ 2022 ರ ತನಕ ಕೇಂದ್ರ ರಾಜ್ಯದಲ್ಲಿ 37,510 ಕೋಟಿ ರೂಪಾಯಿಯಷ್ಟು ವೆಚ್ಚದಲ್ಲಿ 4,601 ಕಿ.ಮೀ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಮಾಡುವ ಕಾರ್ಯಯೋಜನೆ.


## ವೋಟರ್ ಐಡಿ ಕಾರ್ಡ್ ನೋಂದಣಿ ಪ್ರಕ್ರಿಯೆ




ಈಗ ಆನ್ ಲೈನ್ ಮೂಲಕ

**ವೋಟರ್ ಐಡಿ ಕಾರ್ಡ್**

ನೋಂದಣಿ ಮಾಡಬಹುದು.

https://eci.gov.in/voter/voter-registration/

ಅಥವಾ

https://ceo.karnataka.gov.in/en

ಲಿಂಕ್ ಬಳಸಿ ನೋಂದಾಯಿಸಿಕೊಳ್ಳಬಹುದು.

ಅಲ್ಲದೆ **Voter Helpline** ಆ್ಯಪ್

ಮೂಲಕವೂ ನೋಂದಾಯಿಸಬಹುದು.

# ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನಹಾಗೂ ಶಿವಮೊಗ್ಗ ಜಿಲ್ಲಾ ಕಾರ್ಯಾಲಯದ ಸಿಬ್ಬಂದಿ ವರ್ಗದವರು
## ಪ್ರಧಾನಿ ಶ್ರೀ ನರೇಂದರ ಮೋದಿ ಅವರನ್ನು ಭೇಟಿ ಮಾಡಿದ ಸಂದರ್ಭ
















ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ.ಪಿ. ನಡ್ಡಾ ಅವರ ಅಧ್ಯಕ್ಷತೆಯಲ್ಲಿ ರಾಜ್ಯ ಚುನಾವಣಾ ನಿರ್ವಹಣಾ ಸಮಿತಿ ಸಭೆ



ಕಲಬುರ್ಗಿ ವಿಮಾನ ನಿಲ್ದಾಣದಲ್ಲಿ ಲಂಬಾಣಿ ಸಮುದಾಯದವರಿಂದ ಮಾನ್ಯ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿಯವರಿಗೆ ಸನ್ಮಾನ

## ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಯ ಫಲಾನುಭವಿಗಳ ಸಮಾವೇಶ



ಮಡಿಕೇರಿ - ವಿರಾಜಪೇಟೆ



ಮಂಗಳೂರು



ರಾಮದುರ್ಗ



ಹಾವೇರಿ





ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ಅವರಿಂದ ಚಿಕ್ಕಬಳ್ಳಾಪುರದ ನೂತನ ವೈದ್ಯಕೀಯ ಕಾಲೇಜಿನ ಉದ್ಘಾಟನೆ ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ









**ಬೆಳಗಾವಿಯ ಸುವರ್ಣ ವಿಧಾನಸೌಧದ ಪಶ್ಚಿಮ ದ್ವಾರದ**
**ಮುಂಭಾಗದ ಆವರಣದಲ್ಲಿ ಸಂವಿಧಾನ ಶಿಲ್ಪಿ**

## ಡಾ. ಬಿ.ಆರ್. ಅಂಬೇಡ್ಕರ್,

## ವೀರ ರಾಣಿ ಕಿತ್ತೂರು ರಾಣಿ ಚೆನ್ನಮ್ಮ

**ಹಾಗೂ ಸ್ವಾತಂತ್ರ್ಯ ಸಂಗ್ರಾಮದ ಹೋರಾಟಗಾರ**

## ಸಂಗೊಳ್ಳಿ ರಾಯಣ್ಣ

**ಅವರ ಪುತ್ಥಳಿಗಳನ್ನು ಮಾನ್ಯ ಮುಖ್ಯಮಂತ್ರಿಗಳಾದ**
**ಶ್ರೀ ಬಸವರಾಜ ಬೊಮ್ಮಾಯಿ ಅವರಿಂದ ಲೋಕಾರ್ಪಣೆ**

Price : Rs. 10 Pages : 36